## ಅಧ್ಯಾಯ 5

# ಪ್ರಳಯಪೂರ್ವದ ಮೂಲಪಿತೃಗಳು

5ನೇ ಅಧ್ಯಾಯವು ನೋಹನನ್ನು ಹಾಗೂ ಪ್ರಳಯದ ಕಾಲವನ್ನು ಪರಿಚಯಿಸುತ್ತದೆ. ಪ್ರಳಯಕ್ಕೆ ಪೂರ್ವದ ತಲೆಮಾರುಗಳನ್ನು ಮತ್ತು ಘಟನೆಗಳನ್ನು “ಪ್ರಳಯಪೂರ್ವದ” ಎಂದು ಕರೆಯಾಗುತ್ತದೆ, ಇದು ಲ್ಯಾಟಿನ್ ಭಾಷೆಯ ಎರಡು ಪದಗಳಿಂದ ಬಂದಿರುತ್ತದೆ - *ಆಂಟೀ*, ಅಂದರೆ “ಪೂರ್ವ,” ಜೊತೆಗೆ *ಡಿಲುವಿಯುಮ್*, ಇದು ಅಕ್ಷರಶಃ “ಮುಳುಗಿ ಹೋಗು” ಎಂಬ ಅರ್ಥವಿರುವ ಮೂಲ ಪದದಿಂದ ಬಂದಿರುತ್ತದೆ ಮತ್ತು ಆ ಕಾರಣದಿಂದ ಪ್ರಳಯ ಅಥವಾ ಪ್ರವಾಹವನ್ನು ನೆನಪಿಗೆ ತರುತ್ತದೆ. “ಪ್ರಳಯಪೂರ್ವ ಪೂರ್ವಜರು” ಎಂಬ ಪದಗುಚ್ಛವು ಅನೇಕ ಸಾರಿ ಆದಾಮನಿಂದ ನೋಹನ ಕಾಲದ ವರೆಗಿನ ಬೈಬಲ್ ವ್ಯಕ್ತಿಗಳನ್ನು ಸೂಚಿಸುವದಕ್ಕೆ ಬಳಸಲ್ಪಡುವದಾಗಿದ್ದು, ಅದು “ಪ್ರಳಯ-ಪೂರ್ವದ ಪಿತೃಗಳು” ಎಂದು ಹೇಳುವ ಒಂದು ರೀತಿಯಾಗಿರುತ್ತದೆ.

ಆದಿಕಾಂಡದ ಲೇಖಕನು ಆದಾಮನಿಗೆ ಕಾಯಿನನ ಮೂಲಕ ಏಳು ಸಂತತಿಯವರು ಪ್ರಳಯಕ್ಕೆ ಪೂರ್ವದಲ್ಲಿ ಹುಟ್ಟಿದ್ದರು ಎಂಬುದನ್ನು ಈಗಾಗಲೇ ವಿವರಿಸಿರುತ್ತಾನೆ (ಅಧ್ಯಾಯ 4), ಈ ಹಂತದಲ್ಲಿ ಆತನು ಸೇತನ ಮೂಲಕವಾಗಿ ಹುಟ್ಟಿದ “ಆದಾಮನ ವಂಶದವರ” ಕುರಿತಾದ ಹೊಸ ವಿಭಾಗವೊಂದನ್ನು ಆರಂಭಿಸುತ್ತಾನೆ (ಅಧ್ಯಾಯ 5). ಈ ಎರಡನೆಯ ಪಟ್ಟಿಯು ಆದಾಮನಿಂದ ನೋಹನ ತನಕ ಹತ್ತು ತಲೆಮಾರುಗಳನ್ನು ಒಳಗೊಂಡಿರುತ್ತದೆ.

ಈ ಎರಡು ಕಥನಗಳು ಆದಾಮನಿಂದ ನೋಹನ ವರೆಗೂ ಎಷ್ಟು ವರ್ಷಗಳು ಗತಿಸಿದ್ದವು ಎಂಬುದನ್ನು ಕಂಡು ಹಿಡಿಯುವದಕ್ಕೆ ಎರಡು ವಂಶಾವಳಿಗಳನ್ನು ಬಳಕೆ ಮಾಡುವದಕ್ಕೆ ಪ್ರಯತ್ನಿಸುವ ಬೈಬಲ್ ವಿದ್ಯಾರ್ಥಿಗಳ ಮನಸ್ಸುಗಳಲ್ಲಿ ಗೊಂದಲವನ್ನು ಸೃಷ್ಟಿಸಿರುತ್ತವೆ. ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ: (1) ಎಷ್ಟು ಕಾಲವು ಆಗಿರುತ್ತೆಂಬ ವಿಷಯದಲ್ಲಿ, ಕಾಯಿನನ ವಂಶಗಳು ಅಂದಾಜಿನಲ್ಲಿ ಸೇತನ ಕುಟುಂಬದ ವಂಶಗಳಿಗೆ ಸಮಾನವಾಗಿದ್ದವೋ? (2) ಹಾಗಿರುವದಾದಲ್ಲಿ, ಸೇತನ ಸಂತಾನದವರು ಕಾಯಿನನ ಸಂತಾನದವರಿಗಿಂತಲೂ ಅಷ್ಟೊಂದು ದೀರ್ಘಕಾಲ ಏಕೆ ಬಾಳಿದರು? ಇದು ನಿಜಕ್ಕೂ ಆಘಾತಕರವಾಗಿರುತ್ತದೆ, ಯಾಕೆಂದರೆ ಕಾಯಿನನ ಸಂತಾನದವರ ಜೀವಿತಗಳು ಹಿಂಸಾಚಾರದಿಂದ ಕೂಡಿದ್ದವು (4:8–24; 6:1–5, 11–13). ಅವರ ಜೀವಿತಾವದಿಗಳು ಕಡಿಮೆಗೊಳಿಸಲ್ಪಟ್ಟಿದ್ದವೇ, ಹೊರತು ದೀರ್ಘಗೊಳಿಸಲ್ಪಟ್ಟಿರಲಿಲ್ಲ ಎಂಬುದಾಗಿ ಒಬ್ಬನು ಊಹಿಸಿಕೊಳ್ಳಬಹುದು. (3) ಸೇತನ ವಂಶಸ್ಥರಲ್ಲಿರುವ ಪ್ರಕಾರ, ಕಾಯಿನನ ವಂಶಾವಳಿಯಲ್ಲಿ ಅತಿಯಾದ ದೀರ್ಘಾಯುಷ್ಯದ ಜೀವಿತಾವದಿಗಳ ಬಗ್ಗೆ ಪ್ರಸ್ತಾಪಿಸಲ್ಪಟ್ಟಿರುವದನ್ನು ನಾವು ಏಕೆ ಕಾಣುವದಿಲ್ಲ? (4) ಆದಿಕಾಂಡದ ಲೇಖಕನು ಕಾಯಿನನ ಕೇವಲ ಏಳು ತಲೆಮಾರುಗಳ ಬಗ್ಗೆ ಮಾತ್ರವೇ ಹೇಳಿ, ಆದಾಮನಿಂದ ಸೇತ, ಸೇತನಿಂದ ನೋಹನ ತನಕ ಹತ್ತು ತಲೆಮಾರುಗಳನ್ನು ಸೇರ್ಪಡೆಗೊಳಿಸಿದ್ದರಲ್ಲಿ ಸಾಂಕೇತಿಕ ಕಾರಣವೊಂದನ್ನು ಹೊಂದಿದ್ದನೋ? (ಈ ಪ್ರಶ್ನೆಗಳಿಗೆ ಕೆಲವು ಉತ್ತರಗಳನ್ನು ತಿಳಿಯುವದಕ್ಕೆ, ನೋಡಿರಿ *ಅನ್ವಯಿಸುವಿಕೆ: ವಂಶಾವಳಿಗಳು*,

ಪುಟಗಳು 198-206.)

## ಸೃಷ್ಟಿ ಮತ್ತು ಆಶೀರ್ವಾದ (5:1, 2)

**[1]ಆದಾಮನ ವಂಶದವರ ಚರಿತ್ರೆಯು - ದೇವರು ಸೃಷ್ಟಿಕಾಲದಲ್ಲಿ ಮನುಷ್ಯನನ್ನು ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿದನು. [2]ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು. ಇದಲ್ಲದೆ ಅದೇ ದಿವಸದಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯ ಎಂದು ಹೆಸರಿಟ್ಟನು.**

**ವಚನಗಳು 1, 2.** ಈ ವಚನದಲ್ಲಿ ಇನ್ನೊಂದು תּוֹלְדוֹת *(ಟೋಲೆಡೊಥ)* ಹೇಳಿಕೆಯು ಕಾಣಿಸಿಕೊಳ್ಳುತ್ತದೆ, ಆದರೆ ಇದು ಆದಿಕಾಂಡದಲ್ಲಿನ ಇತರ ಎಲ್ಲಾ ಚರಿತ್ರೆಗಳಿಗಿಂತ ಭಿನ್ನವಾಗಿದೆ: ಅದು **ಆದಾಮನ ವಂಶದವರ** *[ಟೋಲೆಡೊಥ]* **ಚರಿತ್ರೆ** [סֵפֶר, *ಸೆಪೆರ]* ಎಂಬ ಮಾತುಗಳನ್ನು ಬಳಸುತ್ತದೆ. ಈ ಭಾಷೆಯು ಆದಿಕಾಂಡದಲ್ಲಿ ಇದನ್ನು ಸೇರ್ಪಡೆಗೊಳಿಸುವ ಮುನ್ನ, ಈ ವಂಶಾವಳಿಯ ಚರಿತ್ರೆಯು ಒಂದು ಪ್ರತ್ಯೇಕವಾದ ಲಿಖಿತ ದಸ್ತಾವೇಜಿನ[1] ರೂಪದಲ್ಲಿ ಇದ್ದದ್ದಾಗಿದ್ದು ಅದನ್ನೇ ಲೇಖಕನು ಆದಾಮನಿಂದ ಸೇತನ ಮೂಲಕವಾಗಿ ನೋಹನ ವರೆಗಿನ ವಂಶಾವಳಿಯನ್ನು ಬರೆಯುವದಕ್ಕೆ ಸಾಮಗ್ರಿಯಾಗಿ ಬಳಸಿಕೊಂಡನು ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ. ಹಳೆಯ ಒಡಂಬಡಿಕೆಯ ಲೇಖಕರಿಗೆ ಪ್ರಾಚೀನ ಕಾಲದಲ್ಲಿ ಅಸ್ತಿತ್ವದಲ್ಲಿದ್ದಂಥ ಇತರ ಪುಸ್ತಕಗಳ (ದಸ್ತಾವೇಜುಗಳು) ಪರಿಚಯವಿತ್ತು, ಉದಾಹರಣೆಗೆ "ಯೆಹೋವವಿಜಯ ಎಂಬ ಗ್ರಂಥ" (ಅರಣ್ಯಕಾಂಡ 21:14) ಮತ್ತು "ಯಾಷಾರ್ ಗ್ರಂಥ" (ಯೆಹೋಶುವ 10:13; 2 ಸಮುವೇಲ 1:18), ಮತ್ತು ಅವರು ದೇವರ ಜನರ ಜೀವಿತಗಳಲ್ಲಿ ನಡೆದ ವಿವಿಧ ಘಟನೆಗಳ ಕುರಿತು ಹೇಳುವ ವೇಳೆ ಅವುಗಳಿಂದ ಉಲ್ಲೇಖಗಳನ್ನು ಮಾಡಿರುತ್ತಾರೆ.

1 ಮತ್ತು 2 ವಚನಗಳ ಉಳಿದ ಭಾಗವು ಒಂದು ಕಾವ್ಯಾತ್ಮಕ ವಾಕ್ಯರಚನೆಯಾಗಿ (ABCBA) ರೂಪಗೊಳ್ಳುವದಾಗಿದ್ದು, ಅದು 1:27 ಮತ್ತು 2:4ರಲ್ಲಿ ಕಂಡು ಬರುವಂಥವುಗಳೊಂದಿಗೆ ಹೋಲಿಕೆಯನ್ನು ಹೊಂದಿರುತ್ತದೆ:

A2: **ದೇವರು ಸೃಷ್ಟಿಕಾಲದಲ್ಲಿ ಮನುಷ್ಯನನ್ನು,**
  B1: **ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿದನು.**
    C1: **ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು,**
A2: **ಇದಲ್ಲದೆ ಅದೇ ದಿವಸದಲ್ಲಿ**
  B2: **ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯಎಂದು ಹೆಸರಿಟ್ಟನು.**

ಇದೇ ರೀತಿಯ ಮಾತುಗಳನ್ನು ಬಳಸುವ ಮೂಲಕ, ಲೇಖಕನು 5ನೇ ಅಧ್ಯಾಯದ ವಂಶಾವಳಿಯನ್ನು ಮೊದಲ ಮನುಷ್ಯನ (ಆದಾಮ) ಸೃಷ್ಟಿಯೊಂದಿಗೆ ಮತ್ತು 1:26-28ರಲ್ಲಿನ ದೈವಶಾಸ್ತ್ರದೊಂದಿಗೆ ಜೋಡನೆ ಮಾಡುತ್ತಾನೆ. ಆತನು ಮತ್ತೊಂದಾವರ್ತಿ "ಮನುಷ್ಯನು" "ದೇವರ ಹೋಲಿಕೆಗೆ ಸರಿಯಾಗಿ" ಉಂಟು ಮಾಡಲ್ಪಟ್ಟನು ಎಂಬುದನ್ನು ಒತ್ತಿ ಹೇಳುತ್ತಾನೆ. ಆತನು ಮನುಷ್ಯನ ಬೀಳುವಿಕೆಯ ಕುರಿತು ಹಾಗೂ ಕಾಯಿನ ಮತ್ತು ಲೆಮೆಕರು ನಡಿಸಿದ್ದ ಕೊಲೆಗಳ ಕುರಿತು ಈಗಾಗಲೇ ಬಣ್ಣಿಸಿದ್ದನು. ಸೇತನಿಂದ ನೋಹನ ವರೆಗಿನ ಕಥೆಯನ್ನು ಮುಂದುವರೆಸುವದಕ್ಕೆ ಮುನ್ನ, ಬಿದ್ದು ಹೋಗಿರುವ ಮನುಷ್ಯನು ಈಗಲೂ ದೇವರ ಸ್ವರೂಪವನ್ನು ಹೊಂದಿದ್ದನು ಎಂಬುದನ್ನು ಪುನಃ ಒತ್ತಿ ಹೇಳುವದಕ್ಕೆ ಬಯಸಿದ್ದನು. ಪಾಪ

ಮತ್ತು ಭ್ರಷ್ಟತೆಗಳು ಜನನದಿಂದ ಬಾಧ್ಯವಾಗಿ ಬರುವದಿಲ್ಲ; ಅವುಗಳು ತಮ್ಮ ಹೃದಯಗಳಲ್ಲಿ ಜನರು ಮಾಡಿಕೊಳ್ಳುವ ಆಯ್ಕೆಗಳ ಫಲಿತವಾಗಿರುತ್ತವೆ (6:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆದಾಮ ಮತ್ತು ಹವ್ವಳರಿಂದ ಕಾಯಿನನ ದುಷ್ಟ ಸಂತತಿಯು ಉದ್ಭವವಾಗಿದ್ದು ಮಾತ್ರವೇ ಅಲ್ಲ (4:1-24), ಆದರೆ ಸೇತನ ನೀತಿವಂತ ಸಂತತಿಯು ಸಹ ಹುಟ್ಟಿತ್ತು (4:25-5:32).

ಲೇಖಕನು ಸೃಷ್ಟಿಯ ಕಥೆಯೊಳಗಿಂದ ಇನ್ನೊಂದು ಪ್ರಮುಖ ಚರ್ಚೆಯಾಂಶವನ್ನು ಪುನರಾವರ್ತಿಸಿದನು (1:26-28): ದೇವರು "ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು. ಇದಲ್ಲದೆ ಅದೇ ದಿವಸದಲ್ಲಿ ಅವರನ್ನು ಆಶೀರ್ವದಿಸಿ ಅವರಿಗೆ ಮನುಷ್ಯ ಎಂದು ಹೆಸರಿಟ್ಟನು" ಎಂಬ ಸತ್ಯ. ಪಾಪವು ಲೋಕದೊಳಗೆ ಬಂದ ಬಳಿಕವೂ ದೇವರ ಸ್ವರೂಪವು (ಹೋಲಿಕೆ) ಉಳಿದದ್ದು ಮಾತ್ರವೇ ಆಗಿರಲಿಲ್ಲ, ಆದರೆ ವಂಶಾಭಿವೃದ್ಧಿಯಾಗಲೆಂದು ದೇವರು ನೀಡಿದ್ದ ಮೂಲ ಆಶೀರ್ವಾದವು ಸಹ ಹಾಗೆಯೇ ಮುಂದುವರೆದಿತ್ತು. ಪುರುಷ ಮತ್ತು ಸ್ತ್ರೀಯ ವಂಶವು ಮಾನವರಿಗೆ ದೇವರು ನೀಡಿದ್ದ ಪ್ರಥಮ ಆಜ್ಞೆಯನ್ನು ನೆರವೇರಿಸಿತ್ತು: "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" (1:28).

1 ಮತ್ತು 2 ವಚನಗಳು ಶಬ್ದಾಡಂಬರವನ್ನು ಒಳಗೊಂಡಿರುತ್ತವೆ, ಇಬ್ರಿಯ ಪದವಾದ אָדָם (*ಆದಾಮ*) ಎಂಬುದು ಮೂರು ಸಾರಿ ಕಾಣಿಸಿಕೊಳ್ಳುತ್ತದೆ. 1 ವಚನದಲ್ಲಿ, ಲೇಖಕನು ಪ್ರಥಮ ಮನುಷ್ಯನನ್ನು ಸೂಚಿಸಿ ಹೇಳುತ್ತಿದ್ದಾನೆ, ಆದ್ದರಿಂದ ಇಬ್ರಿಯ ಪದವನ್ನು "ಆದಾಮ" ಎಂಬ ಸಮರ್ಪಕ ಹೆಸರಿನಿಂದ ಅನುವಾದಿಸತಕ್ಕದ್ದು (ನೋಡಿರಿ 5:3-5). 1 ಮತ್ತು 2ರಲ್ಲಿ, *ಆದಾಮ* ಎಂಬುದು "ಮಾನವರು" ಎಂಬ ಅರ್ಥದಲ್ಲಿ ಜಾತಿವೈಶಿಷ್ಟ್ಯವಾಗಿ ಬಳಸಲ್ಪಟ್ಟಿರುತ್ತದೆ ಮತ್ತು ಕೇವಲ "ಮನುಷ್ಯ" ಎಂದಷ್ಟೆ ಅನುವಾದಿಸಲ್ಪಡತಕ್ಕದ್ದು. ಇದು 2ನೇ ವಚನದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ, ಅಲ್ಲಿ ಲೇಖಕನು "ಅವರನ್ನು ಗಂಡು ಹೆಣ್ಣಾಗಿ ಉಂಟುಮಾಡಿದನು ... ಅವರಿಗೆ ಮನುಷ್ಯ ಎಂದು ಹೆಸರಿಟ್ಟನು" ಎಂಬುದಾಗಿ ಲೇಖಕನು ಹೇಳುತ್ತಾನೆ. ಆದದರಿಂದ, "ಮನುಷ್ಯ" (*ಆದಾಮ*) ಎಂಬುದರ ಮೊದಲ ಅಕ್ಷರವನ್ನು ಇಲ್ಲಿ ದೊಡ್ಡದಾಗಿಸಬಾರದು (ನೋಡಿರಿ NIV). ಇದು ಆದಾಮನನ್ನು ಒಬ್ಬ ವ್ಯಕ್ತಿಯಾಗಿ ಸೂಚಿಸುವದಿಲ್ಲ, ಆದರೆ "ಮಾನವರು" ಅಥವಾ "ಮನುಷ್ಯಜಾತಿ" (see NRSV) ಎಂದು ಸೂಚಿಸುತ್ತದೆ, ಅದರಲ್ಲಿ ಪುರುಷರು ಮತ್ತು ಸ್ತ್ರೀಯರಿಬ್ಬರೂ ಸೇರಿರುತ್ತಾರೆ. ಎರಡು ಲಿಂಗದವರು ಪರಸ್ಪರರಿಂದ ಸ್ವತಂತ್ರರಾಗಿರುವದಿಲ್ಲ (1 ಕೊರಿಂಥ 11:11); ದೇವರಿಂದ ರಚಿಸಲ್ಪಟ್ಟಿರುವ ಸೃಷ್ಟಿಯ ಪ್ರಕ್ರಿಯೆಯನ್ನು ನಡಿಸಿಕೊಂಡು ಹೋಗಬೇಕಾದರೆ ಇಬ್ಬರೂ ಅಗತ್ಯವಿರುತ್ತಾರೆ, ಅದರಲ್ಲಿ ಲೋಕವನ್ನು ಜನರಿಂದ ತುಂಬಿಸುವದಕ್ಕಾಗಿ ಲೈಂಗಿಕವಾಗಿ ಸಂತಾನೋತ್ಪತ್ತಿ ಮಾಡುವಿಕೆ ಮತ್ತು ಶಾರೀರಿಕ ಸಂತಾನಗಳನ್ನು ಹುಟ್ಟಿಸುವದು ಸೇರಿರುತ್ತದೆ.

## ಸೇತನಿಂದ ಹನೋಕನ ತನಕದ ಆದಾಮನ ಹೊಸ ಸಂತತಿ (5:3-20)

### ಆದಾಮನಿಂದ ಸೇತನ ತನಕ (5:3-5)

**3ಆದಾಮನು ನೂರಮೂವತ್ತು ವರುಷದವನಾದಾಗ ರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾದ ಮಗನನ್ನು ಪಡೆದು ಅವನಿಗೆ ಸೇತನೆಂದು ಹೆಸರಿಟ್ಟನು. 4ಸೇತನು ಹುಟ್ಟಿದ ಮೇಲೆ**

**ಆದಾಮನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರು ವರುಷ ಬದುಕಿದನು. [5]ಅವನು ಒಟ್ಟು ಒಂಭೈನೂರ ಮೂವತ್ತು ವರುಷ ಬದುಕಿ ಸತ್ತನು.**

**ವಚನಗಳು 3-5.** ಹೇಬೆಲನು ಸತ್ತು ಬಹಳ ಕಾಲವಾಗಿತ್ತು, ಆದರೆ ಕಾಯಿನನ ಸಂತತಿಯವರ ಮುಖಾಂತರವಾಗಿ ಆದಾಮನ ವಂಶವು ಮುಂದುವರೆದಿತ್ತು, ಅದು 4:1-24ರಲ್ಲಿ ಬರೆಯಲ್ಪಟ್ಟಿರುತ್ತದೆ. ಇಲ್ಲಿ ಲೇಖಕನು **ಸೇತ**ನ ಮೂಲಕವಾಗಿ ಹುಟ್ಟಿದ ಹೊಸ ವಂಶವೊಂದರ ಬಗ್ಗೆ ಪರಿಚಯ ಮಾಡುತ್ತಾನೆ. **ಆದಾಮ**ನು ದೇವರ ಸ್ವರೂಪದಲ್ಲಿ ಮತ್ತು ಹೋಲಿಕೆಯಲ್ಲಿ ಉಂಟು ಮಾಡಲ್ಪಟ್ಟಿದ್ದನಾದ್ದರಿಂದ (1:26, 27; 5:1) ಮತ್ತು **ರೂಪದಲ್ಲಿ ತನ್ನ ಹೋಲಿಕೆಗೆ ಸರಿಯಾದ ಮಗನನ್ನು ಪಡೆದ**ನಾದ್ದರಿಂದ, ದೇವರ ಸ್ವರೂಪವು ಮನುಷ್ಯನ ಬೀಳುವಿಕೆಯಲ್ಲಿ ಕಳೆದು ಹೋಗಿರಲಿಲ್ಲ. ಮೂಲ ಆಶೀರ್ವಾದವು ಆದಾಮನ ಹೊಸ ಸಂತಾನದಲ್ಲಿ ಮುಂದುವರೆದಿತ್ತಾದರೂ, ಸೇತನು ಸಹ ತನ್ನ ಹೆತ್ತವರು ಮಾಡಿದ ಪಾಪದ ಪರಿಣಾಮವನ್ನು ಅನುಭವಿಸಿದನು: ಮರಣ (5:8).

5:3-32ರಲ್ಲಿನ ವಂಶಾವಳಿಯುದ್ದಕ್ಕೂ, ಲೇಖಕನು ಒಂದಾದ ನಂತರ ಒಂದರಂತೆ ಬರುವ ತಲೆಮಾರಿನ ಚೊಚ್ಚಲ ಮಗನ ಜನನದ ಕುರಿತು ಮಾತ್ರವೇ ಬರೆಯುತ್ತಾನೆ. ಈ ನಮೂನೆಗೆ ಹೊರತಾದವರೆಂದರೆ ಆದಾಮನ ಮೊದಲ ಇಬ್ಬರು ಮಕ್ಕಳಾದ ಕಾಯಿನ ಮತ್ತು ಹೇಬೆಲ (4:1, 2), ಮತ್ತು ನೋಹನ ಮೂವರು ಪುತ್ರರು: ಶೇಮ್, ಹಾಮ್, ಯೆಫೆತ್ (5:32). ಪ್ರತಿಯೊಂದು ವಂಶವನ್ನು ಸೇರ್ಪಡೆಗೊಳಿಸುವ ಮೂಲಕ, ಲೇಖಕನು ಒಂದು ಸ್ಥಿರವಾದ ನಮೂನೆಯನ್ನು ಅನುಸರಿಸಿದನು: ಮಗನು ಹುಟ್ಟುವ ವೇಳೆ ತಂದೆಗೆ ಇದ್ದ ವಯಸ್ಸನ್ನು ತಿಳಿಸುತ್ತಾನೆ ಮತ್ತು ಬಳಿಕ ಮಗನ ಹೆಸರನ್ನು ಪ್ರಸ್ತಾಪಿಸುತ್ತಾನೆ. ನಂತರ, ಆತನು ಆ ತಂದೆಯು ತನ್ನ ಮಗನು ಹುಟ್ಟಿದ ಬಳಿಕ ಎಷ್ಟು ವರ್ಷಗಳ ಕಾಲ ಬದುಕಿದ್ದನು ಎಂಬುದನ್ನು ವರದಿ ಮಾಡುತ್ತಾನೆ ಮತ್ತು ಆತನು ಇನ್ನು ಹಲವು **ಗಂಡು ಹೆಣ್ಣು ಮಕ್ಕಳನ್ನು ಪಡೆದನು** ಎಂಬ ಹೇಳಿಕೆಯನ್ನು ಸೇರ್ಪಡೆಗೊಳಿಸುತ್ತಾನೆ. ಅಂತಿಮವಾಗಿ, ಆತನು ಮರಣಿಸುವ ವೇಳೆ ತಂದೆಗೆ ಎಷ್ಟು ವಯಸ್ಸಾಗಿತ್ತೆಂಬುದನ್ನು ತಿಳಿಸುತ್ತಾನೆ.

ಈ ಅಧ್ಯಾಯದಲ್ಲಿ ಪಟ್ಟಿ ಮಾಡಲಾಗಿರುವ ಜನರ ದೀರ್ಘಾಯುಷ್ಯದ ವಿಷಯದಲ್ಲಿ ಒಂದು ವಿಶೇಷ ಟಿಪ್ಪಣಿಯನ್ನು ಬರೆಯುವದು ಅವಶ್ಯವಾಗಿರುತ್ತದೆ. ಉದಾಹರಣೆಗೆ, **ಆದಾಮನು ... ಒಂಭೈನೂರ ಮೂವತ್ತು ವರುಷ ಬದುಕಿ ಸತ್ತನು**. ವಾಸ್ತವಿಕದಲ್ಲಿ, ಈ ಬಹುಪಾಲು ವ್ಯಕ್ತಿಗಳು ಒಂಭೈನೂರ ವರ್ಷಕ್ಕೂ ಅಧಿಕವಾಗಿ ಬದುಕಿದರೆಂದು ಹೇಳಲಾಗಿರುತ್ತದೆ. ಆದಿಕಾಂಡ 5ನೇ ಅಧ್ಯಾಯದಲ್ಲಿ ದಾಖಲಿಸಲಾಗಿರುವಷ್ಟು ಸುದೀರ್ಘ ಜೀವಿತಾವದಿಗಳು ಸಂಭವಿಸಿರುತ್ತವೆ ಎಂಬುದನ್ನು ಸಂದೇಹವಾದಿಗಳು ಅಲ್ಲಗಳೆಯುತ್ತಾರೆ. ಈ ವಯಸ್ಸುಗಳನ್ನು ನಂಬುವದಕ್ಕಾಗುವದಿಲ್ಲ ಎಂದು ತಳ್ಳಿ ಹಾಕುವದರ ಬದಲಾಗಿ, ವಾಚಕನು ಅವುಗಳನ್ನು ಗಂಭೀರವಾಗಿ ತೆಗೆದುಕೊಂಡು, ಅದನ್ನು ದೇವರ ಕೃಪೆಗೆ ಮತ್ತಷ್ಟು ಪುರಾವೆ ಎಂಬುದಾಗಿ ಎಣಿಸತಕ್ಕದ್ದು.[2] ಆದಾಮ, ಹವ್ವ, ಮತ್ತು ಕಾಯಿನರು ತಮ್ಮ ಪಾಪದ ನಿಮಿತ್ತವಾಗಿ ತಕ್ಷಣವೇ ಮರಣದಂಡನೆ ಹೊಂದುವದಕ್ಕೆ ಯೋಗ್ಯರಾಗಿದ್ದಾಗ್ಯೂ ಅವರು ಬದುಕುವದನ್ನು ಮುಂದುವರೆಸುವಂತೆ ದೈವಿಕ ಕೃಪೆಯು ಅವಕಾಶವನ್ನು ಒದಗಿಸಿತ್ತೆಂಬುದನ್ನು 3 ಮತ್ತು 4 ಅಧ್ಯಾಯಗಳು ತೋರಿಸಿ ಕೊಡುತ್ತವೆ.

ಪ್ರಳಯದ ನಂತರದಲ್ಲಿ, ಮನುಷ್ಯರ ಜೀವಿತಾವದಿಗಳು ವೇಗವಾಗಿ ಕಡಿಮೆಗೊಳ್ಳುತ್ತಾ ಹೋದವು. ನೋಹನು 950 ವರ್ಷಗಳ ಕಾಲ ಬದುಕಿದನಾದರೂ (9:29), ಆತನ ಮಗನಾದ ಶೇಮನ ಆಯುಷ್ಯವು ಕೇವಲ 600 ವರ್ಷಗಳಷ್ಟೆ ಆಗಿತ್ತು (11:10, 11). ಅನೇಕ ತಲೆಮಾರುಗಳ

ನಂತರದಲ್ಲಿ, ಅಬ್ರಹಾಮನು 175 ವರ್ಷದವನಾಗಿ ಮರಣಿಸಿದನು (25:7). ಅವನ ಬಳಿಕ ಹಲವಾರು ಶತಮಾನಗಳ ನಂತರದಲ್ಲಿ, ಮೋಶೆಯು 120 ವರ್ಷದವನಾಗುವ ತನಕ ಬದುಕಿದ್ದನು (ಧರ್ಮೋಪದೇಶಕಾಂಡ 34:7). ಜೀವಿತ ಕಾಲವು 70 ಅಥವಾ 80 ವಯಸ್ಸಿಗೆ ತಲುಪುವ ತನಕವೂ ಕಡಿಮೆಯಾಗುತ್ತಲೇ ಸಾಗಿತ್ತು (ಕೀರ್ತನೆ 90:10).

ಮನುಷ್ಯನ ಆಯುಷ್ಯವು ಕಡಿಮೆಗೊಳ್ಳುವುದು ಒಂದು ವಿಧದಲ್ಲಿ, ಜನಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚಳ ಮತ್ತು ಸಾಂಸ್ಕೃತಿಕವಾಗಿ ಮುನ್ನಡೆಗಳನ್ನು ಸಾಧಿಸುತ್ತಿದ್ದಾಗ್ಯೂ, ಪಾಪದ ಕಾರಣದಿಂದ ಇತಿಹಾಸವು ಕೀಳುಮಟ್ಟಕ್ಕೆ ಸಾಗುತ್ತಲಿದೆ ಎಂಬುದಾಗಿ ದೇವರು ಈ ರೀತಿಯಲ್ಲಿ ಹೇಳುತ್ತಿರಬಹುದಾಗಿದೆ. ಆದಾಮನ ವಂಶಾವಳಿಯು ಅಧ್ಯಾಯದಲ್ಲಿ ಪದೇ ಪದೇ ಪುನರಾವರ್ತನೆಗೊಳ್ಳುವಂಥ ಮುಕ್ತಾಯದ ಉಕ್ತಿಯೊಂದಿಗೆ ಅಂತ್ಯಗೊಳ್ಳುತ್ತದೆ: **ಸತ್ತನು** (ನೋಡಿರಿ 5:8, 11, 14, 17, 20, 27, 31). ಈ ಅಶುಭಕರವಾದ ಮರಣ ಗಂಟೆಯ ಘೋಷವು "ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು" ಎಂಬುದನ್ನು ಜ್ಞಾಪಿಸುವದಾಗಿದೆ (ರೋಮಾ 5:12).

ವಂಶಾವಳಿಗಳ ದಾಖಲೆಗಳು ಮಾನವ ಜನಾಂಗದ ಪೂರ್ವಜರ ನಿಖರವಾದ ಪಟ್ಟಿಯನ್ನು, ಅವರಿಗೆ ಮಕ್ಕಳು ಹುಟ್ಟಿದಾಗ ಎಷ್ಟು ವಯಸ್ಸಿನವರಾಗಿದ್ದರು ಮತ್ತು ಯಾವಾಗ ಮರಣಿಸಿದರು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸುತ್ತದೆ. ಬೈಬಲಿನಲ್ಲಿರುವ ವಂಶಾವಳಿಗಳ ಪಟ್ಟಿಗಳನ್ನು ಹೋಲಿಸಿ ನೋಡುವಾಗ ಅವುಗಳು ಆಯಾ ವ್ಯಕ್ತಿಗಳ ಹೆಸರುಗಳನ್ನು ಆಯ್ಕೆ ಮಾಡಿಕೊಂಡು, ಪ್ರಾಮುಖ್ಯವಾದವರ ಹೆಸರುಗಳನ್ನು ಸೇರ್ಪಡೆಗೊಳಿಸಿಕೊಂಡು ತಿಳಿಸುತ್ತವೆಂಬುದು ಗೊತ್ತಾಗುತ್ತದೆ. ಇದರ ಅರ್ಥವೇನೆಂದರೆ ಯಾವದೇ ವಂಶಾವಳಿಯನ್ನು ಸಂಪೂರ್ಣವಾದದ್ದು ಎಂಬುದಕ್ಕಿಂತಲೂ ಪ್ರತಿನಿಧ್ಯಾತ್ಮಕವಾದದ್ದೆಂದು ಕಾಣತಕ್ಕದ್ದು ಎಂಬದೆ.

## ಸೇತನಿಂದ ಹನೋಕನ ತನಕ (5:6-20)

**[6]ಸೇತನು ನೂರ ಐದು ವರುಷದವನಾದಾಗ ಎನೋಷನನ್ನು ಪಡೆದನು. [7]ಎನೋಷನು
ಹುಟ್ಟಿದ ಮೇಲೆ ಸೇತನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರ ಏಳು ವರುಷ
ಬದುಕಿದನು. [8]ಅವನು ಒಟ್ಟು ಒಂಭೈನೂರ ಹನ್ನೆರಡು ವರುಷ ಬದುಕಿ ಸತ್ತನು. [9]ಎನೋಷನು
ತೊಂಭತ್ತು ವರುಷದವನಾದಾಗ ಕೇನಾನನನ್ನು ಪಡೆದನು. [10]ಕೇನಾನನು ಹುಟ್ಟಿದ ಮೇಲೆ
ಎನೋಷನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರ ಹದಿನೈದು ವರುಷ ಬದುಕಿದನು.
[11]ಅವನು ಒಟ್ಟು ಒಂಭೈನೂರ ಐದು ವರುಷ ಬದುಕಿ ಸತ್ತನು. [12]ಕೇನಾನನು ಎಪ್ಪತ್ತು
ವರುಷದವನಾದಾಗ ಮಹಲಲೇಲನನ್ನು ಪಡೆದನು. [13]ಮಹಲಲೇಲನು ಹುಟ್ಟಿದ ಮೇಲೆ
ಕೇನಾನನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರ ನಾಲ್ವತ್ತು ವರುಷ ಬದುಕಿದನು.
[14]ಅವನು ಒಟ್ಟು ಒಂಭೈನೂರ ಹತ್ತು ವರುಷ ಬದುಕಿ ಸತ್ತನು. [15]ಮಹಲಲೇಲನು ಅರುವತ್ತೈದು
ವರುಷದವನಾದಾಗ ಯೆರೆದನನ್ನು ಪಡೆದನು. [16]ಯೆರೆದನು ಹುಟ್ಟಿದ ಮೇಲೆ ಮಹಲಲೇಲನು
ಗಂಡು ಹೆಣ್ಣು ಮಕ್ಕಳನ್ನು ಪಡೆದು ಎಂಟುನೂರ ಮೂವತ್ತು ವರುಷ ಬದುಕಿದನು. [17]ಅವನು ಒಟ್ಟು
ಎಂಟುನೂರ ತೊಂಭತ್ತೈದು ವರುಷ ಬದುಕಿ ಸತ್ತನು. [18]ಯೆರೆದನು ನೂರ ಅರುವತ್ತೆರಡು
ವರುಷದವನಾದಾಗ ಹನೋಕನನ್ನು ಪಡೆದನು. [19]ಹನೋಕನು ಹುಟ್ಟಿದ ಮೇಲೆ ಯೆರೆದನು
ಎಂಟುನೂರು ವರುಷ ಬದುಕಿದನು. [20]ಅವನು ಒಟ್ಟು ಒಂಭೈನೂರ ಅರುವತ್ತೆರಡು ವರುಷ
ಬದುಕಿ ಸತ್ತನು.**

**ವಚನಗಳು 6-20.** 4:25, 26ರಲ್ಲಿನ ಚರಿತ್ರೆಯಲ್ಲಿ ಎಳೆದು ತರಲಾದ **ಸೇತ** ಮತ್ತು ಎನೋಷರನ್ನು ಹೊರತು ಪಡಿಸಿ, **ಕೇನಾನ** (5:9), "ಮಹಲಲೇಲ" (5:12; ಅಥವಾ **ಮಹಾಲಾಲೀಲ**), ಮತ್ತು **ಯೆರೆದ** (5:15) ಇವರಂತಹ ಆದಾಮನ ವಂಶದವರ ಕುರಿತಾಗಿ ಬಹಳ ಕಡಿಮೆ ವಿವರವು ತಿಳಿಸಲ್ಪಟ್ಟಿದೆ. ಈ ವ್ಯಕ್ತಿಗಳು ಶಾಸ್ತ್ರಗಳೊಳಗೆ ಇನ್ನು ಎರಡು ಸಾರಿ ಮಾತ್ರವೇ, 1 ಪೂರ್ವಕಾಲವೃತ್ತಾಂತದಲ್ಲಿ ವಂಶಾವಳಿಯ ಆರಂಭದಲ್ಲಿ (1 ಪೂರ್ವಕಾಲವೃತ್ತಾಂತ 1:1, 2) ಮತ್ತು ಲೂಕನು ಬರೆಯುವಂಥ ಯೇಸುವಿನ ವಂಶಾವಳಿಯ ಆರಂಭದಲ್ಲಿ (ಲೂಕ 3:37, 38) ಮಾತ್ರವೇ ಕಾಣಿಸಿಕೊಳ್ಳುತ್ತಾನೆ.[3] ಕಾಯಿನನ ವಂಶದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಕೆಲವರ ಹಾಗೆಯೇ, ಇವರು ಕೇವಲ ಅಜ್ಞಾತವೇಷಧಾರಿ ಸಂಬಂಧಗಳಷ್ಟೇ ಆಗಿರುತ್ತಾರೆ; ಹೇಗೂ, ಅವರು ಪ್ರಾಮುಖ್ಯವಾಗಿರುತ್ತಾರೆ ಯಾಕೆಂದರೆ ಈ ಜನರು ಅಬ್ರಹಾಮನನ್ನು ಮತ್ತು ಅಂತಿಮವಾಗಿ ಅಬ್ರಹಾಮನ ಮರಿಮೊಮ್ಮಗನಾದ ಯೇಸುವನ್ನು ಲೋಕದೊಳಗೆ ತರುವದಲ್ಲಿ ದೇವರ ಯೋಜನೆಯನ್ನು ಮುಂದುವರೆಸಿಕೊಂಡು ಹೋದವರಾಗಿರುತ್ತಾರೆ, ಈ ಯೇಸುವಿನಿಂದಲೇ ಇಡೀ ಲೋಕವು ಆಶೀರ್ವದಿಸಲ್ಪಡುವಂತಾಗಿತ್ತು (12:3).

# ಹನೋಕನಿಂದ ನೋಹನ ತನಕದ ವಂಶ (5:21-32)

## ಹನೋಕನಿಂದ ಮೆತೂಷೇಲನ ತನಕ (5:21-24)

**21ಹನೋಕನು ಅರುವತ್ತೈದು ವರುಷದವನಾದಾಗ ಮೆತೂಷೆಲಹನನ್ನು ಪಡೆದನು.**
**22ಮೆತೂಷೆಲಹನು ಹುಟ್ಟಿದ ಮೇಲೆ ಹನೋಕನು ಗಂಡು ಹೆಣ್ಣು ಮಕ್ಕಳನ್ನು ಪಡೆದು ದೇವರ**
**ಅನ್ಯೋನ್ಯತೆಯಲ್ಲಿ ಮುನ್ನೂರು ವರುಷ ಬದುಕಿದನು. 23ಅವನು ಬದುಕಿದ ಕಾಲವೆಲ್ಲಾ ಮುನ್ನೂರ**
**ಅರುವತ್ತೈದು ವರುಷ. 24ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ**
**ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು.**

**ವಚನಗಳು 21, 22.** ಸೇತನ ಮುಖಾಂತರವಾದ ಈ ವಂಶಾವಳಿಯಲ್ಲಿ ಏಳನೆಯ ಸ್ಥಾನದಲ್ಲಿ ಹನೋಕನು ಇರುತ್ತಾನೆ, ಈತನು ದೇವರ ಯೋಜನೆಯಲ್ಲಿ ವಿಶಿಷ್ಟವಾಗಿ ಪ್ರಾಮುಖ್ಯವಾಗಿದ್ದನು ಎಂಬ ಆಲೋಚನೆಯನ್ನು ಇದು ತಿಳಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ, ಈತನನ್ನು "ಆದಾಮನಿಗೆ ಏಳನೆಯ ತಲೆಯವನಾದ" ಎಂದು ಕರೆಯಲ್ಪಟ್ಟಿದ್ದಾನೆ (ಯೂದನು 14; NIV).

ಪ್ರಳಯಪೂರ್ವದ ವ್ಯಕ್ತಿಗಳಲ್ಲಿ ಸತ್ತನು ಎಂದು ಹೇಳದೆ ಇರುವಂಥ ಏಕೈಕ ವ್ಯಕ್ತಿಯು ಹನೋಕನು ಮಾತ್ರವೇ ಆಗಿದ್ದಾನೆ. ಇದಕ್ಕೆ ಇದ್ದ ಕಾರಣಗಳಲ್ಲೊಂದು ಎಂದರೆ **ಮೆತೂಷೆಲಹನು ಹುಟ್ಟಿದ ಮೇಲೆ ಹನೋಕನು ... ದೇವರ ಅನ್ಯೋನ್ಯತೆಯಲ್ಲಿ ಮುನ್ನೂರು ವರುಷ ಬದುಕಿದನು** ಎಂಬುದು ಆಗಿರಬಹುದಾಗಿದೆ. ಒಂದು ಮಗುವಿನ ಜನನವನ್ನು ಕೇವಲ ಮಾನವನ ಸಂತಾನೋತ್ಪತ್ತಿಯಿಂದಾದ ಸರಳವಾದ ಕ್ರಿಯೆ ಎಂದು ಕಂಡಿರಬಹುದಾದ ಸೇತನ ಇತರ ಸಂತತಿಯರಂತಲ್ಲದೆ, ಹನೋಕನು ದೇವರ ಜೀವದಾಯಕ ಹಸ್ತವು ತನಗೆ ಮತ್ತು ತನ್ನ ಹೆಂಡತಿಗೆ ಈ ಹೊಸ ಮಗುವಿನ ಜನನದೊಂದಿಗೆ ಆಶೀರ್ವದಿಸಿದೆ ಎಂಬುದನ್ನು ಗ್ರಹಿಸಿಕೊಂಡನೆಂಬುದಾಗಿ ವಾಕ್ಯವೂ ಸೂಚಿಸುವದಂತೆ ಕಾಣಿಸುತ್ತದೆ (4:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬಹುಶಃ ಈ ಕಾರಣದಿಂದಲೇ ಆತನು "ದೇವರೊಂದಿಗೆ

ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ" ಇದ್ದಿರಬಹುದಾಗಿದೆ. ಅನೇಕ ಹೆತ್ತವರು ಭಾವಿಸಿಕೊಳ್ಳುವ ಪ್ರಕಾರವೇ ಈತನ ಸಹ ಭಾವಿಸಿಕೊಂಡಿರಬಹುದಾಗಿದೆ, ಏನೆಂದರೆ ಮಗುವೊಂದು ಹುಟ್ಟಿದ ಕೂಡಲೆ ತಮ್ಮ ಜೀವಿತದಲ್ಲಿ ಒಂದು ಆತ್ಮೀಕ ಸಂಬಂಧದ ಅಗತ್ಯವಿರುತ್ತದೆಂಬುದಾಗಿ ಏಕಾಏಕಿ ಗ್ರಹಿಸಿಕೊಳ್ಳುವರು ಯಾಕೆಂದರೆ ಈ ವಿಷಯದಲ್ಲಿ ಮಕ್ಕಳಿಗೆ ಮಾದರಿಯನ್ನು ತೋರಿಸುವ ಜವಾಬ್ದಾರಿಯು ತಮಗಿರುತ್ತದೆಂದು ಅವರಿಗೆ ಅನ್ನಿಸುತ್ತದೆ. ಪ್ರಕರಣವು ಏನೇ ಆಗಿದ್ದರೂ ಸರಿಯೇ, ಮಹತ್ವಪೂರ್ಣವಾದ ಹೇಳಿಕೆಯು ಏನೆಂದರೆ ಹನೋಕನು ದೇವರ ಸಂಗಡ ನಡೆಯುವ ಪವಿತ್ರಯಾತ್ರೆಯನ್ನು ಆರಂಭಿಸಿದನು ಎಂಬುದೆ.

"ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು" ಎಂಬ ಮಾತು ಸ್ವಭಾವದಲ್ಲಿ ಸಾಮಾನ್ಯವಾಗಿರುತ್ತದೆ, ಮತ್ತು ಅದರ ನಿರ್ದಿಷ್ಟವಾದ ಅರ್ಥವು ಅಸ್ಪಷ್ಟವಾಗಿರುತ್ತದೆ. ಈ ನಿಖರವಾದ ಇಬ್ರಿಯ ಪರಿಭಾಷೆಯು ಶಾಸ್ತ್ರಗಳಲ್ಲಿ ಬಳಸಲ್ಪಟ್ಟಿರುವ ಇನ್ನು ಒಂದೇ ಒಂದು ಸ್ಥಳವೆಂದರೆ ಅದು ನೋಹನನ್ನು ಸೂಚಿಸಿ ಹೇಳುವ ಸಂದರ್ಭವೇ, ಆತನು ಸಹ "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು" ಎಂದು ಹೇಳಲಾಗಿರುತ್ತದೆ (6:9).[4] ಆ ಸನ್ನಿವೇಶದಲ್ಲಿ, ಆತನು "ನೀತಿವಂತನೂ ತನ್ನ ಕಾಲದವರಲ್ಲಿ ತಪ್ಪಿಲ್ಲದವನೂ ಆಗಿದ್ದನು" ಎಂದು ಬಣ್ಣಿಸಲ್ಪಟ್ಟಿದ್ದಾನೆ. ಹೇಗೂ, ತಪ್ಪಿಲ್ಲದವನು ಆಗಿದ್ದನೆಂದಾಕ್ಷಣ ನೋಹನು ಪಾಪರಹಿತನಾಗಿದ್ದನು ಎಂದರ್ಥವಾಗಿರುವದಿಲ್ಲ, ಯಾಕೆಂದರೆ "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ಹಾಗಿದ್ದಾಗ್ಯೂ, ಹನೋಕ ಮತ್ತು ನೋಹ ಇಬ್ಬರೂ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದು (ಇಬ್ರಿಯ 11:5, 7) ದೇವರಿಗೆ "ನಮ್ರವಾಗಿ ನಡೆದು[ಕೊಂಡವರು]" ಆಗಿದ್ದರೆಂದು ತೋರುತ್ತದೆ (ಮೀಕ 6:8; ನೋಡಿರಿ ಮತ್ತಾಯ 23:23). "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡ" ಹನೋಕ, ನೋಹ, ಮತ್ತು ಇತರರು ತಮ್ಮ ಹೃದಯಗಳನ್ನು ಯೆಹೋವನಿಗೋಸ್ಕರ ಸಮರ್ಪಿಸಿಕೊಂಡಿದ್ದರು ಮತ್ತು ಆತನನ್ನು ಮೆಚ್ಚಿಸುವದಕ್ಕೆ ಅಪೇಕ್ಷಿಸಿದರು. ಅವರು ತನ್ನ ದೈನಂದಿನ ಜೀವಿತಗಳಲ್ಲಿ ಆತನೊಂದಿಗೆ ಆರಾಧನೆ ಹಾಗೂ ಸಹವಾಸದಿಂದ ಕೂಡಿದ ಒಂದು ನಿಕಟವಾದ, ವೈಯಕ್ತಿಕ ಸಂಬಂಧವನ್ನು ಅನುಭವಿರಬಹುದಾಗಿದೆ.

**ವಚನ 23. ಹನೋಕನು** ಒಟ್ಟು **ಮುನ್ನೂರ ಅರುವತ್ತೈದು ವರುಷ** ಬದುಕಿದನು. ಆತನ ಜೀವಿತದ ವರ್ಷಗಳು ಸೂರ್ಯನನ್ನಾಧರಿಸಿದ ವರ್ಷವೊಂದರಲ್ಲಿನ ದಿನಗಳ ಸಂಖ್ಯೆಗನುಗುಣವಾಗಿರುತ್ತವೆ. ಆದದರಿಂದ, ಕೆಲವರು ಹನೋಕನ ಜೀವಿತಾವದಿಯು ಒಂದು ಸಂಪೂರ್ಣ ಜೀವಿತಕ್ಕೆ ಸಂಕೇತವಾಗಿರುತ್ತದೆಂದು ಅರ್ಥಮಾಡಿಕೊಳ್ಳುತ್ತಾರೆ. ಹನೋಕನು ಭೂಮಿಯ ಮೇಲೆ ಜೀವಿಸಿದ ವರ್ಷಗಳು ಅವನ ಸಮಕಾಲೀನರ ವರ್ಷಗಳಿಗಿಂತಲೂ ಕಡಿಮೆಯಾಗಿದ್ದವಾದರೂ, ದೇವರೊಂದಿಗಿನ ಅನ್ಯೋನ್ಯತೆಯಲ್ಲಿ ಆತನು ಒಂದು ಪೂರ್ಣ ಜೀವಿತವನ್ನು ನಡಿಸಿದನು.

**ವಚನ 24.** ಹನೋಕನ ನೀತಿಯುಳ್ಳ ಗುಣಸ್ವಭಾವವನ್ನು ಕುರಿತು ಒತ್ತಿ ಹೇಳುವದಕ್ಕೆ ಅವನು **ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ** ಇದ್ದನು ಎಂಬ ವಾಸ್ತವಾಂಶವನ್ನು ವಾಕ್ಯವು ಪುನರಾವರ್ತಿಸುತ್ತದೆ (ನೋಡಿರಿ 5:22). **ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು** (וְאֵינֶנּוּ, *ಐನೆನ್ನು*) ಎಂಬ ಹೇಳಿಕೆಯು ಹಳೆಯ ಒಡಂಬಡಿಕೆಯೊಳಗೆ ಕೆಲವು ಸಮಯಗಳಲ್ಲಿ ಮರಣವನ್ನು ಸೂಚಿಸುವ ಸೌಮ್ಯೋಕ್ತಿಯಾಗಿ ಬಳಸಲ್ಪಟ್ಟಿರುತ್ತದೆ (ನೋಡಿರಿ ಯೋಬ 7:21; 8:22; ಕೀರ್ತನೆ 39:13[14]; 103:16). ಮಧ್ಯಯುಗದ ಯೆಹೂದಿ ವ್ಯಾಖ್ಯಾನಕಾರನಾದ Rashi ಎಂಬುವವನು ಹನೋಕನನ್ನು ಪಾಪ ಮಾಡುವದರಿಂದ

ತಡೆಯುವದಕ್ಕೋಸ್ಕರ ದೇವರು ಅವನನ್ನು ಅಕಾಲಿಕವಾಗಿ ಮರಣಿಸುವಂತೆ ಮಾಡಿದನು ಎಂಬುದಾಗಿ ವಾದಿಸಿದನು.[5] ಹೇಗೂ, ಇಲ್ಲಿ ಆ ಅರ್ಥವು ಇರುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಇದು ಆತನು "ಸತ್ತನು" ಎಂಬ ಪದಗುಚ್ಛಕ್ಕೆ ತದ್ವಿರುದ್ಧವಾಗಿರುತ್ತದೆ, ಇದು 5ನೇ ಅಧ್ಯಾಯದಲ್ಲಿ ಪಟ್ಟಿ ಮಾಡಲಾಗಿರುವ, ಆದಾಮನಿಂದ ನೋಹನ ತನಕವೂ ಇತರ ಎಲ್ಲಾ ಮಾನವರಲ್ಲಿ ಸಾಮಾನ್ಯವಾಗಿರುವ ಸಂಗತಿಯಾಗಿರುತ್ತದಷ್ಟೆ. ಈ ಕಾಲಾವಧಿಯಲ್ಲಿ ಆದಾಮನಿಗಾದ ಗತಿಯಲ್ಲಿ ಪಾಲುಗಾರನಾಗದ ಏಕೈಕ ವ್ಯಕ್ತಿಯಾಗಿ ಹನೋಕನು ಚಿತ್ರಿಸಲ್ಪಟ್ಟಿರುತ್ತಾನೆ: "... ಸತ್ತೇಹೋಗುವಿ" (2:17). ಬದಲಾಗಿ, ಆತನು ತನ್ನನ್ನು ಸುತ್ತುವರೆದಿದ್ದ ಮರಣದ ಭಯಂಕರ ದಂಡನೆಯ ಮಧ್ಯದಲ್ಲಿಯೂ ಬದುಕಿದ್ದನು.

ಹನೋಕನು ದೇವರ ಸಂಗಡವಿಟ್ಟುಕೊಂಡಿದ್ದ ಸಂಬಂಧದ ಗುಣಮಟ್ಟವು ಎಷ್ಟೊಂದು ನಿಕಟವಾಗಿತ್ತೆಂದರೆ ಯೆಹೋವನು ಆತನ ಪರವಾಗಿದ್ದ ಮರಣದಂಡನೆಯನ್ನು ರದ್ದುಗೊಳಿಸಿದ್ದನು ಮತ್ತು ಆತನನ್ನು ಕೇವಲ ತನ್ನ ಇನ್ನಷ್ಟು ಸಮೀಪದ ಸನ್ನಿಧಾನಕ್ಕೆ[6] **ಕರೆದು**ಕೊಂಡಿದ್ದನು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ಹನೋಕನು ಮರಣವನ್ನು ಅನುಭವಿಸದೆ ಒಯ್ಯಲ್ಪಟ್ಟದ್ದು ನಂಬಿಕೆಯಿಂದಲೇ; ಅವನನ್ನು ದೇವರು ತೆಗೆದುಕೊಂಡು ಹೋದದರಿಂದ ಅವನು ಯಾರಿಗೂ ಸಿಕ್ಕಲಿಲ್ಲ; ಅವನು ಒಯ್ಯಲ್ಪಡುವದಕ್ಕಿಂತ ಮೊದಲು ದೇವರಿಗೆ ಮೆಚ್ಚಿಕೆಯಾದವನಾಗಿದ್ದನೆಂದು ಸಾಕ್ಷಿ ಉಂಟು" (ಇಬ್ರಿಯ 11:5). ಆದಿಕಾಂಡ 5ನೇ ಅಧ್ಯಾಯವು ಪ್ರಳಯಕ್ಕೆ ಮುಂಚೆ ದೀರ್ಘಾಯುಷ್ಯವನ್ನು ಹೊಂದಿದ್ದ ಅನೇಕ ವ್ಯಕ್ತಿಗಳ ಕುರಿತು ಪ್ರಸ್ತಾಪಿಸುವದರಿಂದ, ಇಲ್ಲಿ ಇದಕ್ಕಿಂತಲೂ ದೊಡ್ಡ ಆಶೀರ್ವಾದದ ಕಡೆಗೆ ಗಮನವನ್ನು ಸೆಳೆಯುವದಕ್ಕೋಸ್ಕರ ಹನೋಕನ ಕಥೆಯು ಮಧ್ಯದಲ್ಲಿ ಸೇರಿಸಲ್ಪಟ್ಟಿರಬಹುದಾಗಿದೆ. ಅತ್ಯಂಥ ಪ್ರಾಮುಖ್ಯವಾದ ಮಾನವ ಅನುಭವವು ಭೂಮಿಯ ಮೇಲಿನ ಶಾರೀರಿಕ ಜೀವನ ಸುದೀರ್ಘತೆಯಲ್ಲ, ಆದರೆ ದೇವರ ನಿತ್ಯವಾದ ಸನ್ನಿಧಾನಕ್ಕೆ ನಡಿಸುವಂಥ ಆತ್ಮೀಕ ಜೀವಿತದ ಗುಣಮಟ್ಟವೇ ಆಗಿರುತ್ತದೆ.

ಮರಣವನ್ನನುಭವಿಸದೆಯೇ ಪರಲೋಕದೊಳಗೆ ದೇಹದಿಂದ ಸ್ಥಳಾಂತರಗೊಂಡ ಮತ್ತೊಬ್ಬ ಏಕೈಕ ವ್ಯಕ್ತಿಯೆಂದರೆ ಎಲೀಯ (2 ಅರಸು 2:1, 11). ದೇವರು ಆ ಎರಡು ಪ್ರಕರಣಗಳಲ್ಲಿ ಮರಣದಂಡನೆಯನ್ನು ಬಿಟ್ಟುಕೊಟ್ಟನು, ಬಹುಶಃ ಇದು ಯೇಸು ಕ್ರಿಸ್ತನ ಮೂಲಕವಾಗಿ "ಮರಣವು ನುಂಗಿಯೇ ಹೋಯಿತು, ಜಯವಾಯಿತು" (1 ಕೊರಿಂಥ 15:54) ಎಂಬುದಕ್ಕೆ ಪೂರ್ವಗಾಮಿಯಾಗಿರಬಹುದಾಗಿದೆ.

## ಮೆತೂಷೇಲನಿಂದ ಲೆಮೆಕನ ತನಕ (5:25-27)

**25ಮೆತೂಷೆಲಹನು ನೂರ ಎಂಭತ್ತೇಳು ವರುಷದವನಾದಾಗ ಲೆಮೆಕನನ್ನು ಪಡೆದನು.**
**26ಲೆಮೆಕನು ಹುಟ್ಟಿದ ಮೇಲೆ ಮೆತೂಷೆಲಹನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಏಳುನೂರ**
**ಎಂಭತ್ತೆರಡು ವರುಷ ಬದುಕಿದನು. 27ಅವನು ಒಟ್ಟು ಒಂಭೈನೂರ ಅರುವತ್ತೊಂಭತ್ತು ವರುಷ**
**ಬದುಕಿ ಸತ್ತನು.**

**ವಚನಗಳು 25-27. ಮೆತೂಷೇಲನ** ಕುರಿತಾದ ಗಮನಾರ್ಹವಾಗಿರುವಂಥ ವಾಸ್ತವಾಂಶವು ಏನೆಂದರೆ ಆತನು ಪರಿಚಯವಿರುವಂಥ ಬೇರೆ ಯಾವದೇ ಮಾನವ ಜೀವಿಗಿಂತಲೂ ಈತನು ಹೆಚ್ಚು ಕಾಲ - **ಒಂಭೈನೂರ ಅರುವತ್ತೊಂಭತ್ತು ವರುಷ** - ಬದುಕಿದನು ಎಂಬುದೆ. ಆತನಿಗೆ ಏಕೆ ಇಷ್ಟೊಂದು ಸುದೀರ್ಘವಾದ ಆಯುಷ್ಕಾಲವು ದೊರಕಿತ್ತು

- ಆತನ ತಂದೆಯಾದ ಹನೋಕನಾದರೋ ಪಟ್ಟಿಯಲ್ಲಿಯೇ ಅತ್ಯಂಥ ಕ್ಲುಪ್ತಕಾಲದ ಆಯುಷ್ಯನ್ನು ಹೊಂದಿದ್ದನು - ಎಂಬುದು ವಿವರಿಸಲ್ಪಟ್ಟಿಲ್ಲ. "ಮೆತೂಷೇಲ" ಎಂಬ ಹೆಸರಿನ ಅರ್ಥವು ವಿವಾದಕ್ಕೊಳಪಟ್ಟಿದೆ, ಕೆಲವರು ಕಾನಾನ್ಯರ ಭೂಗತಲೋಕದ ದೇವರೊಂದಿಗೆ ಸಂಬಂಧವಿರುತ್ತದೆ ಎಂಬುದಾಗಿ ವಾದಿಸುತ್ತಾರೆ; ಹೇಗೂ, ಅದು ಕೇವಲ "ಈಟಿಯ ಮನುಷ್ಯ"[7] ಎಂಬ ಅರ್ಥವನ್ನು ಕೊಡುವದಾಗಿ ಕಾಣಿಸುತ್ತದೆ.

ಬೈಬಲಿನ ಲೇಖಕನು, ಅವರ ಜೀವಿತಗಳ ವಿವಿಧ ಫಲಿತಗಳನ್ನು ಪರಿಗಣನೆಗೆ ತೆಗೆದುಕೊಳ್ಳುವವನಾಗಿ, ಆದಿಕಾಂಡ 5ನೇ ಅಧ್ಯಾಯದಲ್ಲಿ ಬಣ್ಣಿಸಲಾಗಿರುವ ಮಿಕ್ಕವರಿಗೆ ಹೋಲಿಸಿದರೆ ಕಡಿಮೆ ಕಾಲದ ಆಯುಷ್ಯನ್ನು ಜೀವಿಸಿದ ಬಳಿಕ, ತಂದೆಯು (ಹನೋಕ) ದೇವರೊಂದಿಗೆ ಇರುವದಕ್ಕೋಸ್ಕರ ಎತ್ತಿಕೊಳ್ಳಲ್ಪಟ್ಟರೆ, ಮಗನು (ಮೆತೂಷೇಲ) ವಂಶಾವಳಿಯಲ್ಲಿರುವ ಬೇರೆ ಯಾವದೇ ವ್ಯಕ್ತಿಗಿಂತಲೂ ಹೆಚ್ಚು ಕಾಲದ ವರೆಗೆ ಜೀವಿಸಿದನು ಆದರೆ ಅಂತಿಮವಾಗಿ ಮರಣಕ್ಕೆ ಒಳಗಾದನು ಎಂಬುದನ್ನು ಒತ್ತಿ ಹೇಳುತ್ತಾನೆ. ಅಂತಿಮ ವಿಶ್ಲೇಷಣೆಯಲ್ಲಿ, ಒಬ್ಬ ವ್ಯಕ್ತಿಯು ಎಷ್ಟು ದೀರ್ಘವಾಗಿ ಜೀವಿಸುತ್ತಾನೆಂಬುದು ಅಲ್ಲ, ಆದರೆ ಆತನು ಎಷ್ಟು ಉತ್ತಮವಾಗಿ ಜೀವಿಸುತ್ತಾನೆ ಎಂಬುದು ಪ್ರಾಮುಖ್ಯವಾಗಿರುತ್ತದೆ; ಮತ್ತು ಒಬ್ಬನು "ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾನೋ" ಅಥವಾ ಇಲ್ಲವೋ ಎಂಬುದರ ಮೇಲೆಯೇ ಜೀವನ ಗುಣಮಟ್ಟವು ನಿರ್ಧರಿಸಲ್ಪಡುತ್ತದೆ.

## ಲೆಮೆಕನಿಂದ ನೋಹನ ತನಕ (5:28-32)

**28ಲೆಮೆಕನು ನೂರ ಎಂಭತ್ತೆರಡು ವರುಷದವನಾದಾಗ ಒಬ್ಬ ಮಗನನ್ನು ಪಡೆದು -
29ಯೆಹೋವನು ಶಪಿಸಿದ ಭೂಮಿಯಿಂದ ನಮಗೆ ಉಂಟಾದ ಕೈಕಷ್ಟದಲ್ಲಿಯೂ ಶ್ರಮೆಯಲ್ಲಿಯೂ ಈ ಮಗನು ನಮ್ಮನ್ನು ಉಪಶಮನಗೊಳಿಸುವನು ಎಂದು ಹೇಳಿ ಅವನಿಗೆ ನೋಹ ಎಂದು ಹೆಸರಿಟ್ಟನು. 30ನೋಹನು ಹುಟ್ಟಿದ ಮೇಲೆ ಲೆಮೆಕನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಐನೂರ ತೊಂಭತ್ತೈದು ವರುಷ ಬದುಕಿದನು. 31ಅವನು ಒಟ್ಟು ಏಳುನೂರ ಎಪ್ಪತ್ತೇಳು ವರುಷ ಬದುಕಿ ಸತ್ತನು. 32ನೋಹನು ಐನೂರು ವರುಷದವನಾದಾಗ ಶೇಮ್, ಹಾಮ್, ಯೆಫೆತ್ ಎಂಬ ಮೂರು ಮಂದಿ ಮಕ್ಕಳನ್ನು ಪಡೆದನು.**

**ವಚನಗಳು 28, 29.** ಈ ವಚನವು ಮತ್ತೊಬ್ಬ **ಲೆಮೆಕನನ್ನು** ಪರಿಚಯಿಸುತ್ತದೆ. ಈತನು ಕಾಯಿನನ ಸಂತಾನದವನಿಗಿದ್ದ ಅದೇ ಹೆಸರು ಇತ್ತಾದರೂ (4:18–24), ಈತನು ಬಹಳ ಭಿನ್ನ ರೀತಿಯ ವ್ಯಕ್ತಿಯಾಗಿದ್ದನು. ಆ ಬೇರೊಬ್ಬ ಲೆಮೆಕನು ಪ್ರತೀಕಾರಕ್ಕಾಗಿ ಆಶಿಸುತ್ತಿದ್ದನು ಮತ್ತು ಕೊಲೆಯಲ್ಲಿ ಸಂಭ್ರಮಿಸುತ್ತಿದ್ದನು, ಆದರೆ ಈತನಾದರೋ ಮಾನವರಿಗೆ ಒಂದು ಉತ್ತಮ ಭವಿಷ್ಯವು ಸಿಕ್ಕಲೆಂದು ನಿರೀಕ್ಷಿಸುತ್ತಿದ್ದನು. ವಾಸ್ತವಿಕದಲ್ಲಿ, 5ನೇ ಅಧ್ಯಾಯದಲ್ಲಿ ತನ್ನ ಮಗನ ಹೆಸರಿನೊಂದಿಗೆ ಸಂಬಂಧ ಹೊಂದಿದ್ದ ಏಕೈಕ ತಂದೆಯು ಲೆಮೆಕನಾಗಿದ್ದಾನೆ: **ಯೆಹೋವನು ಶಪಿಸಿದ ಭೂಮಿಯಿಂದ ನಮಗೆ ಉಂಟಾದ ಕೈಕಷ್ಟದಲ್ಲಿಯೂ ಶ್ರಮೆಯಲ್ಲಿಯೂ ಈ ಮಗನು ನಮ್ಮನ್ನು ಉಪಶಮನಗೊಳಿಸುವನು ಎಂದು ಹೇಳಿ ಅವನಿಗೆ ನೋಹ ಎಂದು ಹೆಸರಿಟ್ಟನು.** "ನೋಹ" (נֹחַ, *ನೋವಾಚ*) ಎಂಬ ಹೆಸರು ಅಸ್ಪಷ್ಟವಾದ ವ್ಯುತ್ಪತ್ತಿಶಾಸ್ತ್ರದ್ದಾಗಿರುತ್ತದೆ. 29ನೇ ವಚನದಲ್ಲಿ, ಇದು נָחַם (*ನಾಚಾಮ*) ಎಂಬ ಕ್ರಿಯಾಪದದೊಂದಿಗೆ ಶಬ್ದಾಡಂಬರದ ಬಳಕೆ ಮಾಡಿರುವಂತೆ ಕಾಣಿಸುತ್ತದೆ, ಈ ಕ್ರಿಯಾಪದವನ್ನು NASBಯು "ವಿಶ್ರಾಂತಿ ಕೊಡು" ಎಂದು ಅನುವಾದಿಸುತ್ತದೆ. ಈ ಪದವು ಹೆಚ್ಚು ಅಕ್ಷರಶಃವಾಗಿ "ಸಂತೈಸು" (NIV) ಅಥವಾ

"ಉಪಶಮನ ಉಂಟು ಮಾಡು" (NRSV) ಎಂಬ ಅರ್ಥವನ್ನು ಕೊಡುತ್ತದೆ. ಹೇಗೂ, "ನೋಹ" ಎಂಬುದು נוח *(ನೌವೊಚ)* ಎಂಬ ಕ್ರಿಯಾಪದದೊಂದಿಗೆ ಹೆಚ್ಚು ನೇರವಾಗಿ ಸಂಬಂಧ ಹೊಂದಿರಬಹುದಾಗಿದೆ, ಇದರ ಅರ್ಥವು "ವಿಶ್ರಾಂತಿ" ಎಂದಾಗಿರುತ್ತದೆ ಮತ್ತು ವಿಜಯ ಹಾಗೂ ರಕ್ಷಣೆಯ ಸೂಚ್ಯಾರ್ಥಗಳನ್ನು ಹೊಂದಿರುತ್ತದೆ.[8] ಇದು ಒಂದೇ ರೀತಿಯಲ್ಲಿ ತೋರುವಂತಹ ಆದರೆ ಬೇರೆ ಮೂಲ ಪದಗಳಿಂದ ಬರುವಂಥ ಪದಗಳನ್ನು ಕಾವ್ಯಾತ್ಮಕ ಬಳಕೆ ಮಾಡುವದಕ್ಕೆ ಮತ್ತೊಂದು ಉದಾಹರಣೆಯಾಗಿರಬಹುದು.

"ಲೆಮೆಕ"ನು "ನೋಹ"ನ ಕುರಿತು, ಈತನು "ಕೈಕಷ್ಟದಲ್ಲಿಯೂ ಶ್ರಮೆಯಲ್ಲಿಯೂ ಈ ಮಗನು ನಮ್ಮನ್ನು ಉಪಶಮನಗೊಳಿಸುವನು" ಎಂದು ಮಾತಾಡಿದ ವಿಧದ ತಾತ್ಪರ್ಯವು ಆತನು ತನ್ನ ಮಗನನ್ನು ಒಂದು ರೀತಿಯಲ್ಲಿ ಎರಡನೆಯ ಆದಾಮನಂತೆ ಕಂಡನು ಎಂದಾಗಿರಬಹುದು. ಈತನು ಹೇಗೋ ಒಂದು ರೀತಿಯಲ್ಲಿ **ಭೂಮಿಯ** ಮೇಲಿರುವ ಶಾಪವನ್ನು ರದ್ದುಗೊಳಿಸಿ ಮಣ್ಣಿನಿಂದ ಆಹಾರವನ್ನು ಬೆಳೆಯುವದಕ್ಕೆ ಪ್ರಯಾಸ ಪಟ್ಟವರಿಗೆ ಉಪಶಮನ ಉಂಟು ಮಾಡಲಿರುವಂಥ ಸ್ತ್ರೀಯಲ್ಲಿ ವಾಗ್ದಾನ ಮಾಡಲ್ಪಟ್ಟ ಸಂತಾನ (3:15) ಎಂಬುದಾಗಿ ಆತನು ನಿರೀಕ್ಷಿಸಿದ್ದಿರಬಹುದು. ಮಾನವನ ಪರವಾಗಿ ದೇವರು ಮಾಡಬಹುದಾದ ಕಾರ್ಯವು ಏನಾಗಿರುತ್ತದೆಂದು ಆತನು ಏನೇ ಯೋಚಿಸುತ್ತಿದ್ದಾಗ್ಯೂ, ಒಂದು ದುಷ್ಟ ಹಾಗೂ ಹಿಂಸಾತ್ಮಕ ಪೀಳಿಗೆಯನ್ನು ಪ್ರಳಯದಿಂದ ನಾಶಗೊಳಿಸಿ, ನೋಹ ಮತ್ತು ಆತನ ಕುಟುಂಬವನ್ನಷ್ಟೆ ಬದುಕುಳಿಯುವವರನ್ನಾಗಿ ಮಾಡುವದರಿಂದ ಮಾತ್ರವೇ ಮಾನವರಿಗೆ ಭೂಮಿಯ ಮೇಲೆ ಒಂದು ಆರಂಭವು ಬರುವದು ಎಂಬುದನ್ನು ಲೆಮೆಕನು ನಿಶ್ಚಯವಾಗಿಯೂ ಅರ್ಥಮಾಡಿಕೊಂಡಿರಲಿಲ್ಲ.

**ವಚನಗಳು 30, 31. ಲೆಮೆಕನು ಸತ್ತು** ಹೋಗುವದಕ್ಕಿಂತ ಮುಂಚೆ **ಐನೂರ ತೊಂಭತ್ತೈದು ವರುಷ ಬದುಕಿದನು**. ಆತನ ವಯಸ್ಸನ್ನು ಬಣ್ಣಿಸುವದಕ್ಕೆ "7"ರ ಗುಣಕಾರವು ಬಳಸಲ್ಪಟ್ಟಿರುವದರಿಂದ, ನೋಹನನ ತಂದೆಯು "7" ಅಂಕೆಯಿಂದ ಸಂಕೇತಿಸಲ್ಪಟ್ಟಿರುವಂಥ ಪೂರ್ಣ-ಪ್ರಮಾಣದ ಜೀವನವನ್ನು ಅನುಭವಿಸಿರುವದಕ್ಕೆ ಸಂಕೇತವಾಗಿರುತ್ತದೆಂದು ವಾಚಕನು ಭಾವಿಸಿಕೊಳ್ಳುವ ಒಲವು ತೋರಬಹುದು. ಹೇಗೂ, ಆತನು ಅಂಥ ಆದರ್ಶಪ್ರಾಯ ಜೀವಿತವನ್ನು ನಡಿಸಿದನು ಎಂಬುದಾಗಿ ಯೋಚಿಸುವದಕ್ಕೆ ನಮಗೆ ಯಾವ ಕಾರಣವನ್ನೂ ವಾಕ್ಯವು ನೀಡುವದಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನು ತಾನು ಹಾಗೂ ತನ್ನ ವಂಶದವರು "ಕೈಕಷ್ಟ" ಹಾಗೂ ಪರಿಶ್ರಮಗಳನ್ನು ಅನುಭವಿಸಬೇಕಾಗಿತ್ತೆಂಬುದನ್ನು ಪ್ರಸ್ತಾಪಿಸುತ್ತಾನೆ (5:29). ಅಲ್ಲದೆ **ನೋಹನು ಹುಟ್ಟಿದ ಮೇಲೆ ಲೆಮೆಕನು ಗಂಡು ಹೆಣ್ಣು ಮಕ್ಕಳನ್ನು ಪಡೆದು ಐನೂರ ತೊಂಭತ್ತೈದು ವರುಷ ಬದುಕಿದನು.** ಆತನಿಗೆ ಖಂಡಿತವಾಗಿಯೂ ಅನೇಕ ಮೊಮ್ಮಕ್ಕಳು ಹಾಗೂ ಮರಿ-ಮೊಮ್ಮಕ್ಕಳು ಈ ಸುದೀರ್ಘ ಆಯುಷ್ಯದಲ್ಲಿ ಹುಟ್ಟಿರಬಹುದಾಗಿದೆ. ಚರಿತ್ರೆಯಲ್ಲಿರುವ ವಂಶಾವಳಿಯಲ್ಲಿ ಲೆಮೆಕನು ಪ್ರಳಯವು ಸಂಭವಿಸುವದಕ್ಕೆ ಐದು ವರ್ಷಗಳಷ್ಟು ಮುಂಚಿನ ಕಾಲದಷ್ಟು ಬದುಕಿದ್ದನು (5:30-32; 7:6) ಇರುತ್ತದಾದ್ದರಿಂದ, ಆತನ ಹೆಸರಿಸಲ್ಪಡದ "ಗಂಡು ಹೆಣ್ಣು ಮಕ್ಕಳ" ಸಂತಾನದವರು ಒಂದು ದುಷ್ಟ ಪೀಳಿಗೆಯ ಭಾಗವಾಗಿದ್ದರು ಎಂಬುದನ್ನು ಅರಿತುಕೊಂಡಿರಬೇಕಾಗಿತ್ತು.

**ವಚನ 32. ನೋಹ** ಒಬ್ಬ "ಸುನೀತಿಯನ್ನು ಸಾರುವವನಾಗಿದ್ದು" (2 ಪೇತ್ರ 2:5), ನಾವೆಯು ಕಟ್ಟಲ್ಪಡುತ್ತಿರುವ ವೇಳೆಯಲ್ಲಿ ತನ್ನ ಕಾಲದ ಜನರನ್ನು ತನ್ನ ಸಂದೇಶದಿಂದ ಖಂಡಿಸಿದನು (ಇಬ್ರಿಯ 11:7; 1 ಪೇತ್ರ 3:20). ಇದು ಲೆಮೆಕನ ಹೃದಯದಲ್ಲಿ ಬಹಳಷ್ಟು ನೋವು ಹಾಗೂ ಕಳವಳವನ್ನುಂಟು ಮಾಡಿರಬಹುದಾಗಿದೆ. ಅದರ ಜೊತೆಗೆ, ನೋಹನಿಗೆ

ಮದುವೆಯಾಗಿದ್ದ **ಶೇಮ್, ಹಾಮ್, ಯೆಫೆತ್** ಎಂಬ ಮೂವರು ಪುತ್ರರಿದ್ದರಾದರೂ, ಲೆಮೆಕನ ಕಾಲದ ವೇಳೆ ಇವರಿಗೆ ಮಕ್ಕಳು ಹುಟ್ಟಿರುವ ಬಗ್ಗೆ ಯಾವ ಪ್ರಸ್ತಾಪವೂ ಮಾಡಲ್ಪಟ್ಟಿರುವದಿಲ್ಲ.[9] ಆದದರಿಂದ, ಲೆಮೆಕನು ಯಾವದೇ ವಂಶಜರು ಅಥವಾ ಭವಿಷ್ಯವು ಇಲ್ಲದೆ ತನ್ನ ವಂಶವು ಕಡಿದು ಹಾಕಲ್ಪಡುವದೋ ಎಂದು ಚಕಿತಗೊಂಡವನಾಗಿ ದಿಗಿಲು ಮತ್ತು ಹತಾಶೆಯನ್ನು ಅನುಭವಿಸಿರಬಹುದಾಗಿದೆ. ಅಲ್ಲದೆ, ಪ್ರಳಯವು ಸಂಭವಿಸುವದಕ್ಕೆ ಕೆಲವೇ ವರ್ಷಗಳಿರುವ ತನಕವೂ ಲೆಮೆಕನು ಬದುಕಿದ್ದನಾದ್ದರಿಂದ, ತನ್ನ ಕ್ಷಣಿಸುವ ವರ್ಷಗಳಲ್ಲಿ ಆತನು ಲೋಕದಲ್ಲೆಲ್ಲಾ ರಾರಾಜಿಸುತ್ತಿದ್ದ ದುಷ್ಟತನ ಹಾಗೂ ಹಿಂಸೆಯ ಅಟ್ಟಹಾಸವನ್ನು ಸಹಿಸಿಕೊಂಡು ಇರಬೇಕಾಗಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಇದ್ಯಾವುದೂ "7" ಅಂಕೆಯ ಗುಣಕರದಿಂದ ಸಂಕೇತಿಸಲ್ಪಡುವಂಥ ಪರಿಪೂರ್ಣ ಜೀವಿತಕ್ಕನುಗುಣವಾಗಿ ಇರುವದಿಲ್ಲ. ಈ ಅಂಕೆಯು, ಈ ಅಧ್ಯಾಯದಲ್ಲಿ ಮುಂಚೆ ನೋಡಿದ ಪ್ರಕಾರವೇ ಬೈಬಲಿನ ವಂಶಾವಳಿಗಳಲ್ಲಿ ಒಂದು ಸಾಂಕೇತಿಕ ಅರ್ಥವನ್ನು ಹೊಂದಿರುತ್ತಿತ್ತಾದರೂ, ಲೆಮೆಕನ ಆಯುಷ್ಯದ ದೀರ್ಘತೆಗೆ ಸಂಬಂಧ ಪಟ್ಟಂತೆ ಈ ರೀತಿಯಾಗಿರುವಂತೆ ಕಾಣಿಸುವದಿಲ್ಲ.

ನಾವು ಅನಂತರದಲ್ಲಿ 9:29ನೇ ವಚನದೊಳಗೆ ಕಲಿತುಕೊಳ್ಳುವದೇನೆಂದರೆ, "ಅವನು ಒಟ್ಟು ಒಂಭೈನೂರ್‍ಐವತ್ತು ವರುಷ ಬದುಕಿ ಸತ್ತನು" ಎಂಬುದೆ.

## ಅನ್ವಯಿಸುವಿಕೆ

### ವಂಶಾವಳಿಗಳು (4:17-5:32)

4ನೇ ಅಧ್ಯಾಯದಲ್ಲಿ, ಕಾಯಿನನ ವಂಶಾವಳಿಯಲ್ಲಿ ದುಷ್ಟತನವು ಹೆಚ್ಚಳವಾಗುವದರ ಕುರಿತು ಬಣ್ಣಿಸಲಾಗಿದೆ; ಆದರೆ 5ನೇ ಅಧ್ಯಾಯವು ದೇವರನ್ನು ಆರಾಧಿಸದವರ ವಂಶದವರನ್ನು ಜ್ಞಾಪಕಗೊಳಿಸುತ್ತದೆ: ಸೇತನಿಂದ ನೋಹನ ತನಕದವರು. ಇದು ಮಾನವರು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಡುವಿಕೆ ಹಾಗೂ "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" (1:26-28) ಎಂಬ ಆತನ ಮೂಲ ಆಶೀರ್ವಾದ ಕಡೆಗೆ ಹಿಂದಕ್ಕೆ ಸಾಗುವದರೊಂದಿಗೆ ಆರಂಭಗೊಳ್ಳುತ್ತದೆ. ಅದರ ಪ್ರಮುಖ ಉದ್ದೇಶವು ಸೃಷ್ಟಿಯಿಂದ ಪ್ರಳಯದ ಕಡೆಗೆ ಶೀಘ್ರದಲ್ಲಿ ಮುಂದಕ್ಕೆ ಸಾಗುವ ಮೂಲಕ ಚರಿತ್ರೆಯಲ್ಲಿರುವ ಅಂತರಕ್ಕೆ ಸೇತುವೆಯನ್ನು ನಿರ್ಮಿಸುವದು ಆಗಿರುತ್ತದೆ, ಆದರೆ ಆದಾಮನ ಪಾಪದ ಫಲಿತವಾಗಿ ಭೂಮಿಯ ಮೇಲೆ ಹೇಗೆ ಮರಣವು ಆಳ್ವಿಕೆ ಮಾಡುತ್ತಿತ್ತೆಂಬುದನ್ನು ಸಹ ತೋರಿಸಿ ಕೊಡುವದು ಆಗಿತ್ತು (ರೋಮಾ 5:17). ಇದು 3:15ರಲ್ಲಿ ಮುಂತಿಳಿಸಲ್ಪಟ್ಟಿರುವ ಘರ್ಷಣೆಯನ್ನು ಎದುರು ನೋಡುತ್ತದೆ ಮತ್ತು 6:1-8ರಲ್ಲಿ ಪರಾಕಾಷ್ಠೆಯನ್ನು ತಲುಪುತ್ತದೆ: ಒಂದು ಕಡೆಯಲ್ಲಿ ಕಾಯಿನನ ಹಿಂಸಾತ್ಮಕ ಸಂತಾನ, ಮತ್ತು ಇನ್ನೊಂದು ಕಡೆಗೆ ಸೇತನ ಮೂಲಕವಾಗಿ ಹುಟ್ಟಿದ ನೀತಿಯುಳ್ಳ ಸಂತಾನ ಇರುತ್ತಾರೆ. ವಿರುದ್ಧ ಹೋಲಿಕೆಯು ಪ್ರಮುಖವಾಗಿ ನೋಹನ ಜೀವಿತದಲ್ಲಿ ಕಾಣಿಸುತ್ತದೆ.

*ಆಯ್ದ ವಂಶಾವಳಿಗಳು.* 4:17-24ರಲ್ಲಿ, ಲೇಖಕನು ಕಾಯಿನನ ವಂಶದಲ್ಲಿ ಹುಟ್ಟಿದ ಏಳು ಪೀಳಿಗೆಗಳ ಕುರಿತಾದ ಕ್ಲುಪ್ತ ವಿವರಣೆಯನ್ನು ನೀಡುತ್ತಾನೆ. (ಈ ಲೆಕ್ಕವು ಆದಾಮನನ್ನು ಒಳಗೊಂಡಿರುತ್ತದೆ.) ತರುವಾಯ, 5ನೇ ಅಧ್ಯಾಯದಲ್ಲಿ, ಆತನು ಆದಾಮನ ಸಂತತಿಯವರಲ್ಲಿ ಹತ್ತು ತಲೆಮಾರುಗಳ, ನೋಹ ಹಾಗೂ ಪ್ರಳಯದ ಕಾಲದ ವರೆಗಿನ ಪಟ್ಟಿಯನ್ನು ನೀಡುತ್ತಾನೆ. 1600ರ ವರ್ಷಗಳಲ್ಲಿ ಐರ್ಲ್ಯಾಂಡಿನ ದೈವಶಾಸ್ತ್ರಜ್ಞ ಹಾಗೂ ಇತಿಹಾಸಕಾರನಾದ James

Ussherನು ಕಡೆಯ ವಂಶಾವಳಿಯ ಕುರಿತು ನೀಡಿದ ಮುಚ್ಚುಮರೆಯಿಲ್ಲದ ವ್ಯಾಖ್ಯಾನವು ಏನೆಂದರೆ, ಅದು ಆದಾಮನಿಂದ ನೋಹನ ತನಕದ ಕಾಲಾನುಕ್ರಮದಿಂದ ಕೂಡಿದ ಸಂಪೂರ್ಣ ವೇಳಾಪಟ್ಟಿಯನ್ನು ಕೊಡುತ್ತದೆ, ಅಲ್ಲಿ ಪಟ್ಟಿ ಮಾಡಲ್ಪಟ್ಟಿರುವವರಲ್ಲಿ ಅನೇಕರು ಒಂಭೈನೂರಕ್ಕೂ ಅಧಿಕ ವರ್ಷಗಳ ಕಾಲ ಬದುಕಿದವರಾಗಿದ್ದರು ಎಂಬುದೆ. ಈ ಚರಿತ್ರೆಯಲ್ಲಿ ಪ್ರಸ್ತಾಪಿಸಲ್ಪಟ್ಟಿರುವವರ ದೀರ್ಘಾಯುಷ್ಯದ ಜೀವಿತಗಳನ್ನು ಇಂದು ಅನೇಕರು ನಂಬುವದಕ್ಕೆ ಸಾಧ್ಯವಿಲ್ಲದವುಗಳೆಂದು ಪರಿಗಣಿಸುತ್ತಾರಾದರೂ, ಪ್ರಳಯಕ್ಕೆ ಮುಂಚೆ ಭೂಮಿಯ ಮೇಲಿದ್ದ ಸ್ಥಿತಿಗಳು ಈ ದಿನದಲ್ಲಿರುವವುಗಳಿಗಿಂತಲೂ ಬಹಳ ಭಿನ್ನವಾಗಿದ್ದಿರಬಹುದಾಗಿದೆ, ಆದ್ದರಿಂದ ಅಂಥ ಸುದೀರ್ಘ ಜೀವಿತಾವದಿಗಳು ಸಾಧ್ಯತೆಯ ವ್ಯಾಪ್ತಿಯನ್ನು ಮೀರಿದವುಗಳಾಗಿಲ್ಲದೆ ಇರಬಹುದಾಗಿದೆ.

Ussherನು ನಂಬಿದ್ದೇನೆಂದರೆ ಆದಾಮನಿಂದ ನೋಹನ ವರೆಗಿನ ಹತ್ತು ಪೀಳಿಗೆಗಳ ವಂಶಾವಳಿಯ ದಾಖಲೆಯು ಯಾವದೇ ವೈಯಕ್ತಿಕ ಕಾಲಾನುಕ್ರಮದ ಅಂತರಗಳಿಲ್ಲದ ಒಂದು ಸಂಪೂರ್ಣ ಪಟ್ಟಿಯಾಗಿತ್ತು. ಆತನು ಖಗೋಳ ಶಾಸ್ತ್ರೀಯ ದಾಖಲೆಗಳನ್ನು ಪರೀಕ್ಷಿಸಿದನು, ಪ್ರಾಚೀನ ಕ್ಯಾಲೆಂಡರುಗಳನ್ನು ಸಂಗ್ರಹ ಮಾಡಿದನು, ಮತ್ತು ಪ್ರಾಚೀನ ಅರಸುಗಳ ಐತಿಹಾಸಿಕ ದಾಖಲೆಗಳನ್ನು ಅಧ್ಯಯನ ಮಾಡಿದನು. ಈ ಮಾಹಿತಿಯನ್ನಾಧರಿಸಿ, Ussherನು 5ನೇ ಆಧ್ಯಾಯದಲ್ಲಿ ಹೆಸರಿಸಲ್ಪಟ್ಟಿರುವ ಪ್ರಳಯಪೂರ್ವದ ಪೂರ್ವಜರ ಆಯುಷ್ಕಾಲವನ್ನು ಒಟ್ಟಾಗಿ ಕೂಡಿಸಿದನು ಮತ್ತು ಸೃಷ್ಟಿಯಿಂದ ನೋಹನ ಕಾಲದ ತನಕದ ಕಾಲಮಾನವನ್ನು ಲೆಕ್ಕ ಮಾಡಿದನು. ಪ್ರಳಯವು ಸೃಷ್ಟಿಯಾಗಿ 1,656 ವರ್ಷಗಳಾದ ಬಳಿಕ, ಕ್ರಿ.ಪೂ. 2348ರಲ್ಲಿ ಸಂಭವಿಸಿತು ಎಂಬ ನಿರ್ಣಯಕ್ಕೆ ಬಂದನು. ಈ ಗಣಿತ ಲೆಕ್ಕಾಚಾರದ ಪ್ರಕ್ರಿಯೆಯನ್ನು ಹಿಮ್ಮೋಗವಾಗಿ ಮಾಡುವ ಮೂಲಕ, ಆತನು ಸೃಷ್ಟಿಯ ದಿನಾಂಕವನ್ನು ಕ್ರಿ.ಪೂ. 4004, ಪ್ರಳಯವು ಸಂಭವಿಸುವದಕ್ಕೆ 1,656 ವರ್ಷಗಳ ಮುಂಚೆ ಎಂದು ನಿರ್ಧರಿಸಿದನು.

ಈ ಅಭಿಪ್ರಾಯದ ವಿಷಯದಲ್ಲಿರುವ ಪ್ರಮುಖ ಸಮಸ್ಯೆಯು ಹೀಗಿರುತ್ತದೆ: ಇದು ಆದಿಕಾಂಡದ ಆರಂಭಿಕ ಅಧ್ಯಾಯಗಳಲ್ಲಿ ದಾಖಲಿಸಲ್ಪಟ್ಟಿರುವ ಘಟನೆಗಳೆಲ್ಲಾ, ಮಾತ್ರವಲ್ಲದೆ ಇತಿಹಾಸ ಹಾಗೂ ಉತ್ಖನನ ಶಾಸ್ತ್ರದ ಅಧ್ಯಯನದಿಂದ ನಮಗೆ ಪ್ರಾಚೀನ ನಾಗರೀಕತೆಗಳ ಕುರಿತು ತಿಳಿದಿರುವ ಘಟನೆಗಳೆಲ್ಲಾ ಸಹ ಸಂಭವಿಸುವದಕ್ಕೆ ಕೇವಲ ಒಂದು ಕ್ಲುಪ್ತ ಕಾಲಾವಧಿಯನ್ನಷ್ಟೇ ಒದಗಿಸುತ್ತದೆ.[10] ಸೃಷ್ಟಿ ಮತ್ತು ಪ್ರಳಯದ ನಡುವೆ ಕೇವ 1,656 ವರ್ಷಗಳಿಗೆ ಮಾತ್ರ ಅವಕಾಶ ಕೊಡುವದು ಕಠಿಣ ಎಂಬುದಕ್ಕೆ ಐಗುಪ್ತವು ಒಂದು ಪ್ರಮುಖ ಉದಾಹರಣೆಯಾಗಿದೆ: ಸಾಭಿತುಗೊಂಡಿರುವ ಉತ್ಖನನಶಾಸ್ತ್ರದ ಪುರಾವೆಗಳ ಪ್ರಕಾರ ಮೊದಲ ಐಗುಪ್ತ್ಯದ ರಾಜವಂಶವು ಕ್ರಿ.ಪೂ. 3100ರಲ್ಲಿತ್ತು. ಇದೇ ವಿಧವಾದ ಪುರಾವೆಯು ಸಾಭಿತುಪಡಿಸುವದೇನೆಂದರೆ, ನೈಲ್ ಕಣಿವೆಯಲ್ಲಿ ಒಬ್ಬ ರಾಜನ ಅಡಿಯಲ್ಲಿ ಐಕ್ಯರಾಜ್ಯವು ಅಸ್ತಿತ್ವದಲ್ಲಿರುವದಕ್ಕೆ ಬಹಳ ಕಾಲದ ಹಿಂದೆಯೇ, ಅನೇಕ ವಿಭಜಿತ ರಾಜ್ಯಗಳು ಪ್ರಾಚೀನ ಜಗತ್ತಿನ ಆ ಕ್ಷೇತ್ರದಲ್ಲಿ ದೀರ್ಘಕಾಲದ ತನಕ ಅಸ್ತಿತ್ವದಲ್ಲಿದ್ದವು. ಇವುಗಳು ಆದಿಕಾಂಡ 10ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವಂತೆ, ಪ್ರಳಯವು ಸಂಭವಿಸಿ ಬಹಳ ಕಾಲವಾದ ಮೇಲೆ ಮತ್ತು ಮಾನವರು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಳಗೊಂಡ ತನಕವೂ ಉದ್ಭವವಾಗಿರುವ ಸಾಧ್ಯತೆಯು ಬಹಳ ಕಡಿಮೆಯಿರುತ್ತದೆ. ಆದದರಿಂದ, Ussherನು ನೀಡಿದ ವಂಶಾವಳಿಗಿಂತಲೂ ಆದಿಕಾಂಡ 5ನೇ ಅಧ್ಯಾಯದಲ್ಲಿನ ವಂಶಾವಳಿಯು ಭಿನ್ನವಾಗಿರುತ್ತದೆಂದು ನಾವು ವ್ಯಾಖ್ಯಾನಿಸತಕ್ಕದ್ದು, ವಿಶೇಷವಾಗಿ ಬೈಬಲಿನ ಇತರ ವಂಶಾವಳಿಗಳ ಪಟ್ಟಿಗಳಲ್ಲಿ ಅನೇಕ ಅಂತರಗಳಿರುತ್ತವೆಂಬ ಕಾರಣಕ್ಕೆ ಹೀಗೆ ಮಾಡಬೇಕಾಗಿರುತ್ತದೆ.[11]

ಪ್ರಾಚೀನ ಜಗತ್ತಿನಲ್ಲಿ, ವಂಶಾವಳಿಯ ಪಟ್ಟಿಗಳನ್ನು ಅನೇಕ ಸಾರಿ ಶೈಲಿಯ ದೃಷ್ಟಿಯಿಂದ ಮತ್ತು ಕಂಠಪಾಠ ಮಾಡಿಕೊಳ್ಳಲು ಸಹಾಯ ಒದಗಿಸುವದಕ್ಕೋಸ್ಕರ ಕ್ಲುಪ್ತಗೊಳಿಸಲಾಗುತ್ತಿತ್ತು, ಇದು ಬರವಣಿಗೆ ಯುಗಕ್ಕೆ ಬಹಳ ಮುಂಚೆಯೇ ನಡೆಯುತ್ತಿತ್ತು. ಕೆಲವು ಸಾರಿ ಹಳೆಯ ಒಡಂಬಡಿಕೆಯಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಆ ವ್ಯಕ್ತಿ ಮಾತ್ರವೇ ಅಲ್ಲ, ಆದರೆ ಇಡೀ ಕುಟುಂಬಗಳನ್ನು ಅಥವಾ ನೂರಾರು ವರ್ಷಗಳ ವರೆಗೂ ಆತನಿಂದ ಹುಟ್ಟಿದ ಇಡೀ ಗೋತ್ರವನ್ನು ಪ್ರತಿನಿಧಿಸುವದಕ್ಕೆ ಬಳಸಲಾಗುತ್ತಿತ್ತು. ಇದರ ಒಂದು ಸ್ಪಷ್ಟವಾದ ಉದಾಹರಣೆಯು ನ್ಯಾಯಸ್ಥಾಪಕ 1:3ರಲ್ಲಿ ಸಿಕ್ಕುತ್ತದೆ, ಅಲ್ಲಿ ಕಥನವು "ಯೆಹೂದ" ಮತ್ತು "ಸಿಮೆಯೋನ"ರನ್ನು ವ್ಯಕ್ತಿಗಳೆಂಬುದಾಗಿ ಮಾತಾಡುವಂತೆ ಕಾಣಿಸುತ್ತದೆ. ವಾಕ್ಯಭಾಗವು ಹೀಗೆ ಹೇಳುತ್ತದೆ, "ಯೆಹೂದ್ಯರು ತಮ್ಮ ಸಹೋದರರಾದ ಸಿಮೆಯೋನ್ಯರಿಗೆ ..." ಹೇಗೂ, ಸನ್ನಿವೇಶದ ಕುರಿತು ಪರೀಕ್ಷಿಸುವಾಗ ತಿಳಿದು ಬರುವದೇನೆಂದರೆ ಯಾಕೋಬನ ನಿಜವಾದ ಮಕ್ಕಳಾದ ಯೆಹೂದ ಮತ್ತು ಸಿಮೆಯೋನರು ಸತ್ತು ನೂರಾರು ವರ್ಷಗಳು ಗತಿಸಿದ್ದರಾದ್ದರಿಂದ, ವಾಕ್ಯಭಾಗವು ಇಡೀ ಗೋತ್ರದ ಘಟಕಗಳ ಚಟುವಟಿಕೆಗಳನ್ನು ಕುರಿತು ಬಣ್ಣಿಸುತ್ತಿದೆ ಎಂಬುದೆ.[12]

*ಸಂಖ್ಯೆ "10."* ವಂಶಾವಳಿಗಳನ್ನು ಅರ್ಥಮಾಡಿಕೊಳ್ಳುವದರಲ್ಲಿ ಪರಿಗಣಿಸಬೇಕಾದ ಇನ್ನೊಂದು ವಿಷಯವೆಂದರೆ ಸಂಖ್ಯೆಗಳ ಪ್ರಾಮುಖ್ಯತೆಯೇ. 5:1-32ರಲ್ಲಿ ಆದಾಮನಿಂದ ನೋಹನ ತನಕದ ಹತ್ತು ಸಂತತಿಗಳ ಕುರಿತು ಬಣ್ಣಿಸಲಾಗಿದೆ. ಹತ್ತೊಂಭತ್ತನೆಯ ಶತಮಾನದ ಕಡೆಯ ಭಾಗದಿಂದಲೂ, ಈ ವಂಶಾವಳಿಯ ದಾಖಲೆಯು ಸುಮೆರಿಯನ್ ಅರಸರ ಪಟ್ಟಿಯೊಂದಿಗೆ ಹೋಲಿಕೆ ಮಾಡಲ್ಪಟ್ಟಿರುತ್ತದೆ. ಆ ಪಟ್ಟಿಯು, ಪ್ರಳಯಕ್ಕೆ ಮುಂಚೆ ಅತ್ಯಂಥ ಸುದೀರ್ಘವಾದ ಆಯುಷ್ಯನ್ನು ಜೀವಿಸಿದ್ದ ಹತ್ತು ಅರಸರನ್ನು ಹೆಸರಿಸುತ್ತದೆ.

ಈ ಮೆಸಪೋತಾಮ್ಯದ ಅರಸರ ದಾಖಲೆಯನ್ನು ಆದಿಕಾಂಡ 5ನೇ ಅಧ್ಯಾಯದಲ್ಲಿನ ಹತ್ತು ಹೆಸರುಗಳಿಗೆ, ಮಾತ್ರವಲ್ಲದೆ ಆ ಮೂಲಪಿತೃಗಳು ಹೊಂದಿದ್ದರೆಂದು ಹೇಳಲಾಗಿರುವ ದೀರ್ಘಾಯುಷ್ಯಗಳಿಗೆ ಮೂಲವೆಂದು ಕಾಣಲಾಗುತ್ತದೆ. ಹೇಗೂ, ಈ ಪಟ್ಟಿಗಳ ನಡುವಿನ ವ್ಯತ್ಯಾಸಗಳು ಅವುಗಳಲ್ಲಿರುವ ಸಾಮ್ಯತೆಗಳಿಗಿಂತಲೂ ಎಷ್ಟೋ ಅಧಿಕವಾಗಿರುತ್ತವೆ. ಈ ವ್ಯತ್ಯಾಸಗಳಿಗೆ ಹಲವಾರು ಉದಾಹರಣೆಗಳನ್ನು ಕೊಡಬಹುದಾಗಿದೆ, ಆದರೆ ಕೆಲವೊಂದನ್ನು ನೀಡಿದರೆ ಸಾಕಾಗುತ್ತದೆ. (1) ಸುಮೆರಿಯನ್ ಅರಸರ ಪಟ್ಟಿಯ ಇನ್ನಿತರ ಆವೃತ್ತಿಗಳು ಕಂಡು ಹಿಡಿಯಲ್ಪಟ್ಟಿದ್ದು ಮತ್ತು/ಅಥವಾ ಪುನಃರಚಿಸಲ್ಪಟ್ಟಿದ್ದು ಅವುಗಳಲ್ಲಿ ಹತ್ತು ಅರಸರಲ್ಲ, ಆದರೆ ಕೇವಲ ಏಳು ಅರಸರು ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತಾರೆ. (2) ಒಂದು ದಾಖಲೆಯು ಹತ್ತು ಸಂತತಿಗಳ ಪಟ್ಟಿಯನ್ನು ಮಾಡುತ್ತದಾದರೂ, ಕಥನವು ಅರಸರ ಬಗ್ಗೆ ಮಾತ್ರವೇ ತಿಳಿಸುತ್ತದೆ; ಬೈಬಲಿನಲ್ಲಿರುವ ಪ್ರಕಾರ, ಆ ಪಟ್ಟಿಯು ಪ್ರಥಮ ಮನುಷ್ಯನಿಂದ ಆರಂಭಗೊಳ್ಳುವದಿಲ್ಲ. (3) ವಿವಿಧ ಅರಸನ ಪಟ್ಟಿಯನ್ನು ಕೊಡುವದರ ಉದ್ದೇಶವು ಮೆಸಪೋತಾಮ್ಯದಲ್ಲಿ ಆಧಿಪತ್ಯದ ಹಕ್ಕೋತ್ತಾಯ ಮಾಡುವುದು ಆಗಿತ್ತೇ, ಹೊರತು ಆದಾಮನಿಂದ ಮಾನವ ಜನಾಂಗದಲ್ಲಿ ಬದುಕುಳಿದ ಏಕೈಕ ಜನರಾದ ನೋಹ ಮತ್ತು ಆತನ ಕುಟುಂಬದ ವರೆಗಿನ ಮಾನವ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುವದು ಆಗಿರಲಿಲ್ಲ. (4) ಸುಮೆರಿಯನ್ ಅರಸರ ಆಳ್ವಿಕೆಯ ಕಾಲಾವಧಿಯು ಮುಂಬರುವ ಪಟ್ಟಿಗನುಗುಣವಾಗಿ ಭಿನ್ನವಾಗಿರುತ್ತದಾದರೂ, ಅವೆಲ್ಲವೂ ಅತಿಶಯೋಕ್ತಿಗೊಳಿಸಿ ಹೇಳಲ್ಪಟ್ಟವುಗಳಾಗಿವೆ. ಅಂದಾಜು ಮಾಡಲ್ಪಟ್ಟಿರುವ ಅತಿ ಸುದೀರ್ಘವಾದ ಆಳ್ವಿಕೆಯೆಂದರೆ 72,000 ವರ್ಷಗಳು; ವರದಿ ಮಾಡಲ್ಪಟ್ಟಿರುವ ಅತಿ ಕ್ಲುಪ್ತವಾದ ಆಳ್ವಿಕೆಯೆಂದರೆ 6,000ವರ್ಷಗಳು.[13] ಒಟ್ಟಾಗಿ ಕೂಡಿಸುವದಾದರೆ, ಆಳ್ವಿಕೆಯ

ಕಾಲಗಳು ಬೈಬಲಿನ ವಂಶಾವಳಿಯಲ್ಲಿ ಪಟ್ಟಿ ಮಾಡಲಾಗಿರುವ ಪೂರ್ವಜರ ಸರಾಸರಿ ಆಯುಷ್ಕಾಲಕ್ಕಿಂತ ಐವತ್ತು ಪಟ್ಟು ದೀರ್ಘವಾಗಿರುತ್ತವೆ. ಆದದರಿಂದ, ಆದಿಕಾಂಡ 5ನೇ ಅಧ್ಯಾಯದಲ್ಲಿನ ವಂಶಾವಳಿಯು ಸುಮೆರಿಯನ್ ಅರಸರ ಪಟ್ಟಿಯನ್ನಾಧರಿಸಿದ್ದಾಗಿದೆ ಎಂಬ ಹೇಳಿಕೆಯನ್ನು ಯಾವದೇ ವಾಸ್ತವಿಕವಾದ ಪುರಾವೆಯೂ ಬೆಂಬಲಿಸುವದಿಲ್ಲ.

ಆದಿಕಾಂಡದ ಲೇಖಕನು "10" ಅಂಕೆಯನ್ನು ಪ್ರಾಮುಖ್ಯ ವ್ಯಕ್ತಿಗಳ ಪಟ್ಟಿಯೊಂದನ್ನು ಒಟ್ಟಗೂಡಿಸುವದಕ್ಕೆ ಒಂದು ಸೂಕ್ತವಾದ ಅಂಕಿ ಎಂಬುದಾಗಿ ಬಳಸಿರುವ ಸಾಧ್ಯತೆಯಿರುತ್ತದೆ, ಅದೇ ರೀತಿಯೇ ಒಬ್ಬ ದಾಖಲೆಗಾರನು ಸುಮೆರಿಯನ್ ಅರಸರ ಪಟ್ಟಿಯನ್ನು ಬರೆದಿಟ್ಟಿರುತ್ತಾನೆ, ಆ ಮೆಸಪೋತಾಮ್ಯದ ಚರಿತ್ರೆಯಲ್ಲಿ ಯಾವದೂ ಸಹ ಬೈಬಲಿನ ಲೇಖಕನು ಆದಿಕಾಂಡ 5ನೇ ಅಧ್ಯಾಯದಲ್ಲಿ ಸಂರಕ್ಷಿಸಲಾಗಿರುವ ಮಾಹಿತಿಗೋಸ್ಕರ ಅದರ ಮೇಲೆ ಅವಲಂಬಿತನಾಗಿದ್ದನೆಂಬುದನ್ನು ಸೂಚಿಸುವದಿಲ್ಲ.

"10" ಅಂಕೆಯು ಪ್ರಾಚೀನ ಮಧ್ಯ ಪ್ರಾಚ್ಯದ ಜನರಿಗೆ ಯಾವದೇ ವಿಶೇಷವಾದ ಮಹತ್ವವನ್ನು ಹೊಂದಿರುವಂತೆ ಕಾಣಿಸುವದದಿಲ್ಲ, ಅದಾಗ್ಯೂ ಏಕೆ ಈ ರೀತಿಯಾಗಿತ್ತೆಂಬುದನ್ನು ನಾವು ಖಚಿತವಾಗಿ ಹೇಳಲಾಗುವದಿಲ್ಲ. ಪ್ರಳಯದ ಬಳಿಕ, ಶೇಮನಿಂದ (ನೋಹನ ಮಗ) ಅಬ್ರಹಾಮನ ತನಕದ ಹತ್ತು ವಂಶಗಳಿಂದ ಮತ್ತೊಂದು ಕಾಲಾವಧಿಯು ಪ್ರತಿನಿಧಿಸಲ್ಪಟ್ಟಿರುತ್ತದೆ (11:10-26). ಖಂಡಿತವಾಗಿಯೂ, ಪ್ರಳಯದಿಂದ ಅಬ್ರಹಾಮನ ವರೆಗೂ ಹತ್ತು ಅಕ್ಷರಶಃ ವಂಶಗಳು ಮಾತ್ರವೇ ಇದ್ದಿರುವ ಸಾಧ್ಯತೆಯಿದೆ. ರೂತಳು 4:18-22ರಲ್ಲಿರುವ ಒಂದು ವಂಶಾವಳಿಯಿಂದ, ಎರಡನೆಯದು ಆಯ್ದ ಪಟ್ಟಿಯಾಗಿದ್ದು ಅದರಿಂದ ಹಲವಾರು ಹೆಸರುಗಳು ಕೈ ಬಿಡಲ್ಪಟ್ಟಿವೆ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ, ಅದು ಪೆರೆಚನಿಂದ ದಾವೀದನ ವರೆಗಿನ ಕೇವಲ ಹತ್ತು ವಂಶದವರನ್ನು ಮಾತ್ರವೇ ಪ್ರಸ್ತಾಪಿಸುತ್ತದೆ. ಮೊದಲನೆಯದ್ದರ ವಿಷಯದಲ್ಲಿಯೂ ಇದು ಅಷ್ಟೇ ಸತ್ಯವಾಗಿರಬಹುದಾಗಿದೆ.

ಪೆರೆಚ ಮತ್ತು ದಾವೀದನ ನಡುವೆ ಎಷ್ಟೊಂದು ವರ್ಷಗಳು ಗತಿಸಿದವು ಎಂಬುದು ಯಾರಿಗೂ ತಿಳಿಯದು; ಆದರೆ, ಬೈಬಲ್ ವಾಕ್ಯದ ಪ್ರಕಾರವಾಗಿ, ಯೋಸೇಫನು ಸುಮಾರು ಐಗುಪ್ತದವರಿಗೆ ಮಾರಲ್ಪಟ್ಟ ಕಾಲಮಾನದ (38:29; 39:1) ಹೊತ್ತಿಗೆ ಪೆರೆಚನುನ ಹುಟ್ಟಿರಬಹುದಾಗಿದೆ. ನಿಜವಾದ ಸಮಸ್ಯೆಯು ಯೋಸೇಫನು ಐಗುಪ್ತದೊಳಗೆ ಪ್ರವೇಶಿಸಿದ ದಿನಾಂಕವನ್ನು ನಿರ್ಧರಿಸುವದೇ ಆಗಿರುತ್ತದೆ. ಈ ಘಟನೆಗೆ ಇರಬಹುದಾದ ಆರಂಭಿಕ ದಿನಾಂಕವು ಕ್ರಿ.ಪೂ. 1898; ಆದರೆ ಹಲವಾರು ಪಂಡಿತರು ಅನಂತರದ ದಿನಾಂಕವಾದ ಕ್ರಿ.ಪೂ. 1710ನ್ನು ಆರಿಸಿಕೊಳ್ಳುತ್ತಾರೆ, ಪೆರೆಚ ಮತ್ತು ದಾವೀದನ ನಡುವೆ ಒಂದು 188 ವರ್ಷಗಳಷ್ಟು ಚಿಕ್ಕದಾದ ಕಾಲಾವಧಿಯೊಂದನ್ನು ಕಲ್ಪಿಸಿಕೊಳ್ಳುವವರಾಗಿರುತ್ತಾರೆ. ಕ್ರಿ.ಪೂ. 1010ನೇ ದಿನಾಂಕವು ದಾವೀದನ ಆಳ್ವಿಕೆಯು ಆರಂಭಗೊಂಡಂಥ ಕಾಲವೆಂದು ವ್ಯಾಪಕವಾಗಿ ಅಂಗೀಕರಿಸಿಕೊಳ್ಳಲ್ಪಟ್ಟಿರುವ ಕಾರಣ, ಪೆರೆಚ ಹಾಗೂ ದಾವೀದನ ರಾಜಪ್ರಭುತ್ವದ ವರೆಗೆ 888 ವರ್ಷಗಳು ಗತಿಸಿದ್ದವೋ (ಆರಂಭಿಕ ಅಭಿಪ್ರಾಯ), ಅಥವಾ ಆ ಎರಡು ಘಟನೆಗಳ ನಡುವೆ ಕೇವಲ 700 ವರ್ಷಗಳು ಮಾತ್ರವೇ ಇದ್ದವೋ ಎಂಬ ಪ್ರಶ್ನೆಯಷ್ಟೇ ಇಲ್ಲಿರುತ್ತದೆ.

ಪೆರೆಚ ಮತ್ತು ದಾವೀದನ ನಡುವೆ ಎಷ್ಟು ವಂಶಗಳು ಇದ್ದವು ಎಂಬುದನ್ನು ನಿರ್ಧರಿಸುವದರಲ್ಲಿ ಅಡಕವಾಗಿರುವ ಸಮಸ್ಯೆಯು ಏನೆಂದರೆ ಎಷ್ಟು ವರ್ಷಗಳನ್ನು ಒಂದು ತಲೆಮಾರು ಎಂಬುದಾಗಿ ಎಣಿಸತಕ್ಕದ್ದು ಎಂಬ ಪ್ರಶ್ನೆಯೇ ಆಗಿರುತ್ತದೆ. ಪ್ರಾಚೀನ ಸಮಯಗಳಲ್ಲಿ, ಒಬ್ಬ ವ್ಯಕ್ತಿಯು ಹುಟ್ಟಿದ ಕಾಲದಿಂದ ಅವನಿಗೆ ಚೊಚ್ಚಲ ಮಗನು ಹುಟ್ಟುವ ವರೆಗಿನ ಕಾಲಾವಧಿಯನ್ನು ಒಂದು ತಲೆಮಾರು ಎಂದು ಲೆಕ್ಕಿಸಲಾಗುತ್ತಿತ್ತೆಂದು ತೋರುತ್ತದೆ.[14]

ಖಂಡಿತವಾಗಿಯೂ, ಈ ಕಾಲಮಿತಿಯು ಮೂಲಪಿತೃಗಳ ಕಡೆಯ ಕಾಲಾವಧಿಯಲ್ಲಿ[15] ಸುಮಾರು 40 ವರ್ಷಗಳಿಂದ ಮೋಶೆಯ ಕಾಲಾವಧಿಯಲ್ಲಿ ಸುಮಾರು 25 ವರ್ಷಗಳಿಗೆ ಬದಲಾಗಿರಬಹುದಾಗಿದೆ, ಯಾಕೆಂದರೆ ಜನರ ಆಯುಷ್ಕಾಲವು ಸುಮಾರು 70 ವರ್ಷಗಳಿಗೆ ಕುಗ್ಗಿಸಲ್ಪಟ್ಟಿತ್ತು (ನೋಡಿರಿ ಕೀರ್ತನೆ 90:10). ಅಂದಾಜು 30 ವರ್ಷಗಳು[16] ಬಹುಶಃ ಪೆರೆಚನಿಂದ ದಾವೀದನ ವರೆಗಿನ 888 ವರ್ಷಗಳಿಗೂ ಅಧಿಕ ಕಾಲಾವಧಿಯಲ್ಲಿ ಒಂದು ತಲೆಮಾರಿನ ಸರಾಸರಿ ಅವಧಿಗೆ ಸಮೀಪವಾಗಿರಬಲ್ಲದು, ಈ ಇಬ್ಬರು ವ್ಯಕ್ತಿಗಳ ನಡುವೆ 29½ ತಲೆಮಾರುಗಳಿದ್ದವೆಂಬ ಲೆಕ್ಕಾಚಾರಕ್ಕೆ ನಡಿಸುತ್ತದೆ. ಒಂದು ತಲೆಮಾರಿಗೆ 30 ವರ್ಷಗಳ ಅಂಕಿಯನ್ನು ಲೆಕ್ಕಿಸುವದು ಮತ್ತು 700 ವರ್ಷಗಳ ಕ್ಲುಪ್ತ ಕಾಲದಲ್ಲಿ ವಿಭಜನೆಯನ್ನು ಮಾಡುವದಾದರೆ ಪೆರೆಚ ಮತ್ತು ದಾವೀದನ ನಡುವೆ 23 ತಲೆಮಾರುಗಳು ಇದ್ದವೆಂದಾಗುತ್ತದೆ. ಅದನ್ನು ಹೇಗೆ ಲೆಕ್ಕಾಚಾರ ಮಾಡಿದರೂ ಸರಿಯೇ, ಫಲಿತಾಂಶವು ರೂತಳು 4:18-22ರಲ್ಲಿ ಮುಂದಿಡಲ್ಪಟ್ಟಿರುವ ಹತ್ತು ತಲೆಮಾರುಗಳಿಗಿಂತಲೂ ಅತ್ಯಧಿಕವಾಗುತ್ತದೆ. ಇದು ಸೂಚಿಸುವದೇನೆಂದರೆ "10" ಸಂಖ್ಯೆಯು ಒಂದು ಸೂಕ್ತವಾದ ಸಂಖ್ಯೆಯಂತೆ ಸಾಂಕೇತಿಕ ಮಹತ್ವವನ್ನು ಹೊಂದಿರಬಹುದಾಗಿದೆ, ಮತ್ತು ಈ ಕಾರಣದಿಂದ ಕೇವಲ ಅತ್ಯಂಥ ಪ್ರಾಮುಖ್ಯರಾದ ಹತ್ತು ಜನರನ್ನು ಮಾತ್ರವೇ ಒಂದು ವಂಶಾವಳಿಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲಾಗಿತ್ತು.

*ಸಂಖ್ಯೆ "7."* ರೂತಳು 4:18-22ರಲ್ಲಿ, ಸಂಖ್ಯೆ "7" ಸಹ ವಿಶೇಷವಾದ ಮಹತ್ವವನ್ನು ಹೊಂದಿರುವಂತೆ ಕಾಣಿಸುತ್ತದೆ. ಬೋವಜನು ವಂಶಾವಳಿಯಲ್ಲಿ ಏಳನೆಯವನಾಗಿ ಪಟ್ಟಿ ಮಾಡಲ್ಪಟ್ಟಿರುತ್ತಾನೆ; ಮತ್ತು ಖಚಿತವಾಗಿ ತಿಳಿಯತಕ್ಕದ್ದೇನೆಂದರೆ, ಅವನು ಕಥೆಯಲ್ಲಿ ಪುರುಷ ನಾಯಕನಾಗಿರುತ್ತಾನೆ.[17] ಮಾನವನ ಚರಿತ್ರೆಯ ಆರಂಭ ಕಾಲದಿಂದಲೂ, ಸಂಖ್ಯೆ "7" ಪರಿಪೂರ್ಣತೆ ಮತ್ತು ಸಂಪೂರ್ಣತೆಯನ್ನು ಪ್ರತಿನಿಧಿಸುವಂತೆ ತೋರುತ್ತದೆ ಯಾಕೆಂದರೆ ದೇವರು ಮಾಡಿದ ಸೃಷ್ಟಿ ಹಾಗೂ ವಿಶ್ರಾಂತಿಗಳು ಏಳು ದಿನಗಳಲ್ಲಿ ಪೂರ್ತಿಗೊಂಡಿದ್ದವು (1:1-2:3). ಆದಾಮನ ವಂಶದ ಕಥನವು ಕಾಯಿನನಿಂದ ಆರಂಭಗೊಂಡು ಲೆಮೆಕನ ಮಕ್ಕಳೊಂದಿಗೆ ಅಂತ್ಯಗೊಳ್ಳುವದಾಗಿದೆ ಮತ್ತು ಏಳು ತಲೆಮಾರುಗಳನ್ನು ಒಳಗೊಂಡಿದೆ, ಆದರೆ ಲೆಮೆಕನ ಮೂವರು ಪುತ್ರರು ಸೇರಿದಂತೆ, ಅದರೊಳಗೆ ಹತ್ತು ಪುರುಷ ಸದಸ್ಯರನ್ನು ಪಟ್ಟಿ ಮಾಡಲಾಗಿದೆ (4:17-22).[18]

ಲೆಕ್ಕವು ಆದಾಮನಿಂದ ಆರಂಭಗೊಂಡು ಕಾಯಿನನ ಮೂಲಕವಾಗಿ ಹುಟ್ಟಿದ ಆತನ ವಂಶವನ್ನು ಒಳಗೊಂಡಿರುವದಾದರೆ, "ಲೆಮೆಕ"ನು ಆ ದಾಖಲೆಯಲ್ಲಿ ಏಳನೆಯವನಾಗುವನು. ನಿಸ್ಸಂದೇಹಕರವಾಗಿ, ಪ್ರಳಯಕ್ಕೆ ಮುಂಚಿನ ಕಾಯಿನನ ವಂಶದಲ್ಲಿ ಪಟ್ಟಿ ಮಾಡಲ್ಪಟ್ಟಿರುವದಕ್ಕಿಂತಲೂ ಹೆಚ್ಚು ಸಂತಾನದವರನ್ನು ಒಳಗೊಂಡಿತ್ತು, ಯಾಕೆಂದರೆ ಲೇಖಕನು ಮುಂದೆ ಸೇತನ ಕುಟುಂಬ ಸಂತತಿಗಳನ್ನು ಬಣ್ಣಿಸುತ್ತಾನೆ. ಆತನು ಆದಾಮನೊಂದಿಗೆ ಆರಂಭಿಸುತ್ತಾನೆ, ಸೇತನ ಮೂಲಕ ಮುಂದುವರೆಯುತ್ತಾನೆ, ಮತ್ತು ನೋಹನೊಂದಿಗೆ ಅಂತ್ಯಗೊಳಿಸುತ್ತಾನೆ (5:1-29). ಆದಿಕಾಂಡದ ಲೇಖಕನು ಹೇಗೆ ಲೆಕ್ಕಿಸಲ್ಪಡುತ್ತವೆಂಬುದರ ಆಧಾರದಲ್ಲಿ ಹತ್ತು ಹೆಸರುಗಳುಳ್ಳ ಪಟ್ಟಿಯಲ್ಲಿ ಲೆಮೆಕನ ಹೆಸರನ್ನು ಏಕೆ ಏಳನೆಯದಾಗಿ ಹೆಸರಿಸಿದನು? ಲೇಮೆಕನು ಸೃಷ್ಟಿಯಾಗಿ ಏಳು ತಲೆಮಾರುಗಳು ಕಳೆಯುವಷ್ಟರಲ್ಲಿಯೇ ಕೊಲೆಯಲ್ಲಿ ಹೆಚ್ಚಳ ಪಡುವವನಾಗಿದ್ದದರಿಂದ, ದುಷ್ಟತನ ಹಾಗೂ ಹಿಂಸೆಗಳು ಆತನಿಂದಾಗಿ ಎಷ್ಟೊಂದು ಉತ್ತುಂಗ ಸ್ಥಿತಿಯನ್ನು (ಸಂಪೂರ್ಣತೆ) ತಲುಪಿದ್ದವು ಎಂಬುದನ್ನು ಆತನು ಒತ್ತಿ ಹೇಳುವದಕ್ಕೆ ಬಯಸಿರಬಹುದು.

ಅಂತಿಮವಾಗಿ, ಅಂತಹ ದ್ವೇಷಭರಿತ ಹಾಗೂ ಪ್ರತೀಕಾರದ ಮನೋಭಾವವು ವ್ಯಾಪಕವಾದ ಹಿಂಸಾಚಾರ ಮತ್ತು ಕೊಲೆಯಲ್ಲಿ ಸಮಾಪ್ತಿಗೊಂಡಿತ್ತು. ಇದು ಹೆಚ್ಚುಕಡಿಮೆ ಸಮಾಜದಲ್ಲೆಲ್ಲಾ ಒಳವ್ಯಾಪಿಸಿಕೊಂಡಿತ್ತು ಮತ್ತು ನೋಹನ ಕಾಲದಲ್ಲಿ ದೇವರು ಮಹಾ ಪ್ರಳಯವನ್ನುಂಟು ಮಾಡಿ ನ್ಯಾಯತೀರ್ಪು ಕೊಡುವಂತೆ ನಡಿಸಿತ್ತು. ಬಹುಶಃ ದೇವರು ಆ ಪುರಾತನ ಜಗತ್ತಿಗೆ ಅಂತ್ಯವು ಬರುವಂತೆ ಮಾಡಿದ ವಿನಾಶಕಾರಿ ಘಟನೆಗಳಿಗೆ ಜವಾಬ್ದಾರಾಗಿದ್ದ ಆ ಮಾನವರ ಅಂತಿಮ ಪೀಳಿಗೆಗಳ ಹಿಂಸಾತ್ಮಕ ಹಾಗೂ ದುಷ್ಟ ಸದಸ್ಯರ ಹೆಸರುಗಳನ್ನು ಸಂರಕ್ಷಿಸುವದಕ್ಕೆ ಇಷ್ಟಪಡಲಿಲ್ಲವೆಂದು ಕಾಣಿಸುತ್ತದೆ. ಆ ಪ್ರತಿಯೊಬ್ಬ ದುಷ್ಟ ವ್ಯಕ್ತಿಗಳೊಳಗೆ ಲೆಮೆಕನ ಪ್ರತೀಕಾರದ ಆತ್ಮವು (4:23, 24) ಜೀವಿಸುತ್ತಿತ್ತೇನೋ ಎಂಬಂತೆ ತೋರುತ್ತಿತ್ತು.

ಕಾಯಿನನ ವಂಶಕ್ಕೆ ಸಂಬಂಧ ಪಟ್ಟಂತೆ, "7" ಸಂಖ್ಯೆ ಮತ್ತು ಲೆಮೆಕನ ಹೇಳಿಕೆಯಲ್ಲಿ ಅದರ ದ್ವಿಗುಣತೆಯಾಗುವದರ ಪ್ರಾಮುಖ್ಯತೆಯ ಕಡೆಗೆ ಇನ್ನಷ್ಟು ಗಮನವನ್ನು ಹರಿಸತಕ್ಕದ್ದು. ಇದು ವಾಚಕನನ್ನು 5ನೇ ಅಧ್ಯಾಯದಲ್ಲಿ "7" ಸಂಖ್ಯೆಗಿರುವ ಮಹತ್ವಪೂರ್ಣವಾದ ಸ್ಥಾನದ ವಿಷಯದಲ್ಲಿ ಸಿದ್ಧಗೊಳಿಸುವದು. ಸೇತನ ಮೂಲಕವಾಗು ಮುಂದುವರೆದ ಆದಾಮನ ವಂಶಗಳ ಕುರಿತಾದ ಚರಿತ್ರೆಯಲ್ಲಿ, ಹನೋಕನು ಏಳನೆಯ ತಲೆಮಾರು ಎಂದು ಪ್ರಕಟಗೊಳಿಸಲ್ಪಟ್ಟಿದ್ದಾನೆ (5:1-19). ಲೆಮೆಕ ಮತ್ತು ಹನೋಕ ಇಬ್ಬರೂ ಆದಾಮನಿಂದ ಬಂದ (ಬೇರೆ ಬೇರೆ ವಂಶದಿಂದ ಬಂದಂಥ) ಏಳನೆಯ ಸಂತತಿಯವರು ಎಂದು ಚಿತ್ರಿಸಲ್ಪಟ್ಟಿರುತ್ತಾರೆ; ಆದರೆ, ಮೊದಲನೆಯವನು ಏಳರಷ್ಟು ಪ್ರತೀಕಾರಕ್ಕಾಗಿ ಬಯಕೆಯನ್ನು ಹೊಂದಿದವನಾಗಿ ದುಷ್ಟತನದ ವ್ಯಕ್ತೀಕರಣದಂತಿದ್ದರೆ, ಎರಡನೆಯವನು ಈ ಲೋಕಕ್ಕೆ ಯೋಗ್ಯನಲ್ಲದೆ ಇದ್ದಂಥ ಒಬ್ಬ ನಂಬಿಗಸ್ತ ಹಾಗೂ ಭಕ್ತಿಯುಳ್ಳ ವ್ಯಕ್ತಿಗೆ ಸಂಕೇತವಾಗಿದ್ದನು. ಆದದರಿಂದ "ದೇವರು ಅವನನ್ನು ಕರೆದುಕೊಂಡನು" (5:24).

ಮತ್ತಾಯನು ನೀಡುವ ಯೇಸುವಿನ ವಂಶಾವಳಿಯಲ್ಲಿ ಸಂಖ್ಯೆಯ "7"ರ ಪ್ರಾಮುಖ್ಯತೆ ಮತ್ತು ಅದರಲ್ಲಿರುವ ಅಂತರಗಳನ್ನು ಲೂಕನು ನೀಡುವ ವಂಶಾವಳಿ, ಮಾತ್ರವಲ್ಲದೆ ಹಳೆಯ ಒಡಂಬಡಿಕೆಯ ಕೆಲವೊಂದು ಕಥನಗಳಿಗೆ ವಿರುದ್ಧವಾಗಿ ಹೋಲಿಕೆ ಮಾಡಿ ಪರೀಕ್ಷಿಸಬಹುದಾಗಿದೆ. ಮತ್ತಾಯ 1:1-17ರಲ್ಲಿ ಅಬ್ರಹಾಮನಿಂದ ಯೇಸುವಿನ ತನಕ ನಾಲ್ವತ್ತೇರಡು ವಂಶಾವಳಿಗಳಿರುವದಾಗಿ ಪಟ್ಟಿ ಮಾಡಲಾಗಿದೆ, ಮತ್ತು ಇವುಗಳನ್ನು ಹದಿನಾಲ್ಕು ವಂಶಾವಳಿಗಳಂತೆ (7 x 2) ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ. ಹೇಗೂ, ಈ ಸಂಖ್ಯೆಗಳನ್ನು ನಿರ್ಣಯಿಸಬೇಕಾದರೆ, ಮತ್ತಾಯನು "ಯೆಕೊನ್ಯ" ಎಂಬ ಹೆಸರನ್ನು ಎರಡು ಸಾರಿ ಬಳಸುತ್ತಾನೆ, ಎರಡನೆಯ ಗುಂಪಿನಲ್ಲಿ ಕಡೆಯ ಹೆಸರಾಗಿ ಮತ್ತು ಮೂರನೆಯ ಗುಂಪಿನಲ್ಲಿ ಮೊದಲನೆಯ ಹೆಸರಾಗಿ ಬಳಕೆ ಮಾಡುತ್ತಾನೆ (ಮತ್ತಾಯ 1:11, 12).

ಲೂಕ 3:23-38ರಲ್ಲಿರುವ ವಂಶಾವಳಿಯು ಮೊದಲು ಎರಡು ಗುಂಪುಗಳ ಪಟ್ಟಿ ಮಾಡುತ್ತದೆ, ಪ್ರತಿಯೊಂದು ಗುಂಪು ಯೇಸುವಿನಿಂದ ಪುನಃ ದಾವೀದನ ಕಡೆಗೆ ಸಾಗುವಂಥ ಇಪ್ಪತ್ತೊಂದು ವಂಶಾವಳಿಗಳನ್ನು (7 x 3) ಒಳಗೊಂಡಿದೆ. ತರುವಾಯ, ದಾವೀದನಿಂದ ಅಬ್ರಹಾಮನ ತನಕ ಸಾಗುವದಾಗಿದ್ದು, ಅದು ಹದಿನಾಲ್ಕು (7 x 2). ವಂಶಾವಳಿಗಳನ್ನು ಹೆಸರಿಸುತ್ತದೆ. ಅಂತಿಮವಾಗಿ, ಅದು ಅಬ್ರಹಾಮನಿಂದ ಆದಾಮನ ಕಡೆಗೆ ಸಾಗುವ ಇಪ್ಪತ್ತೊಂದು (7 x 3) ವಂಶಾವಳಿಗಳನ್ನು ಹೆಸರಿಸುತ್ತದೆ. ಯೇಸುವಿನ ಪುನಃ ಆದಾಮನ ಕಡೆಗೆ ಸಾಗುವ ಒಟ್ಟು ವಂಶಾವಳಿಗಳ ಸಂಖ್ಯೆಯು ಏಪ್ಪತ್ತೇಳು (7 x 11) ಎಂದು ಗುರುತಿಸಲಾಗಿದೆ. ಲೂಕನ ಪಟ್ಟಿಯಲ್ಲಿ ಈ ಕೆಳಗಿನವರಿಗೆ ಪ್ರಾಧಾನ್ಯತೆಯನ್ನು

ಕೊಡಲಾಗಿರುತ್ತದೆ: ಹನೋಕನು ಏಳನೆಯವನು, ಸಾಲನು ಹದಿನಾಲ್ಕನೆಯವನು, ಮತ್ತು ಅಬ್ರಹಾಮನು ಇಪ್ಪತ್ತೊಂದನೆಯ ಸ್ಥಾನದಲ್ಲಿರುತ್ತಾನೆ. ಅಮ್ಮಿನಾದಾಬನು ಇಪ್ಪತ್ತೆಂಟನೆಯವನು, ದಾವೀದನು ಮೂವತ್ತೈದನೆಯವನು, ಮತ್ತು ಯೋನಾಮನ ಮಗನಾದ ಯೋಸೇಫನು ನಾಲ್ವತ್ತೆರಡನೆಯ ಸ್ಥಾನದಲ್ಲಿರುತ್ತಾನೆ. ಎಣಿಕೆಯು ಮುಂದುವರೆದಂತೆ, ಎಲಿಯೇಜರನ ಮಗನಾದ ಯೆಹೋಷುವನು ನಾಲ್ವತ್ತೊಂಭತ್ತನೆಯವನೆಂದು ಗುರುತಿಸಲ್ಪಟ್ಟಿದ್ದಾನೆ, ಸಲಥಿಯೇಲನು ಐವತ್ತಾರನೆಯ ಸ್ಥಾನದಲ್ಲಿರುತ್ತಾನೆ, ಮತ್ತು ಶಿಮೀಯ ಮಗನಾದ ಮತ್ತಥೀಯನು ಅರವತ್ತೂ-ಮೂರನೆಯ ಸ್ಥಾನವನ್ನು ವಹಿಸಿಕೊಂಡಿರುತ್ತಾನೆ. ಮತ್ತಥೀಯನ ಮಗನಾದ ಯೋಸೇಫನು ಏಳನೆಯವನಾಗಿ ಪ್ರತ್ಯೇಕವಾಗಿ ಗುರುತಿಸಲ್ಪಟ್ಟಿರುತ್ತಾನೆ; ಅಂತಿಮವಾಗಿ, ನ್ಯಾಯಯುತವಾಗಿ "ಯೋಸೇಫನ ಮಗ"ನಾದ ಯೇಸುವು ಆದಾಮನ ಎಪ್ಪತ್ತೇಳನೆಯವ (7 x 11) ವಂಶಸ್ಥನೆಂದು ಗುರುತಿಸಲ್ಪಟ್ಟಿದ್ದಾನೆ.[19]

ಮತ್ತಾಯನ ಸುವಾರ್ತೆಯಲ್ಲಿರುವ ವಂಶಾವಳಿಗಳ ಸಂಖ್ಯೆ ಹಾಗೂ ಲೂಕನ ಚರಿತ್ರೆಯಲ್ಲಿ ಕೊಡಲಾಗಿರುವ ವಂಶಾವಳಿಗಳ ಸಂಖ್ಯೆಯಲ್ಲಿ ವ್ಯತ್ಯಾಸಗಳನ್ನು ಕಾಣುವ ಆಧುನಿಕ ವಿಶ್ಲೇಷಕರು ಅನೇಕ ಸಾರಿ ಸಮಸ್ಯೆಗೊಳಗಾಗುತ್ತಾರೆ. ಆ ರೀತಿಯಾಗಿ ವ್ಯತ್ಯಾಸಗಳಿರುವಂತೆ ಕಾಣಿಸುವಂಥದ್ದು ಶಾಸ್ತ್ರಗಳ ಪ್ರೇರಣೆಯ ವಿಷಯದಲ್ಲಿ ಸಂದೇಹವನ್ನು ಹುಟ್ಟು ಹಾಕುತ್ತವೆಂದು ಅವರು ಕಳಕಳಿಯನ್ನು ವ್ಯಕ್ತಪಡಿಸುತ್ತಾರೆ. ಹೇಗೂ, ಪ್ರಾಚೀನ ಬೈಬಲ್ ಲೇಖಕರನ್ನು ಎಲ್ಲಾ ಸಂಗತಿಗಳು ಪಟ್ಟಿ ಮಾಡಲ್ಪಡಬೇಕೆಂದು ಮತ್ತು ವಂಶಾವಳಿಗಳ ಸಂಖ್ಯೆಯ ಸರಿಯಾಗಿ ಒಂದೇ ವಿಧದಲ್ಲಿರಬೇಕೆಂದು ಬಯಸುವಂತಹ ಈಗಿನ ಕಾಲದ ಲೆಕ್ಕಾಧಿಕಾರಿ ಅಥವಾ ವಂಶಾವಳಿ ತಜ್ಞನ ಮನಃಸ್ಥಿತಿಗೊಳಪಡುವಂತೆ ಒತ್ತಾಯಿಸುವದು ಒಂದು ತಪ್ಪು ಆಗುತ್ತದೆ. ಬೈಬಲಿನ ಲೇಖಕರು ಇಂದಿನ ವಿಶ್ಲೇಷಕರು ಹೊಂದಿರುವಂಥಹ ಆದ್ಯತೆಗಳಿಗಿಂತಲೂ ವ್ಯತ್ಯಾಸವಾದ ಆದ್ಯತೆಗಳನ್ನು ಹೊಂದಿದ್ದರು, ಮತ್ತು ತಕ್ಷಣ ಸಂಬಂಧದ ತಂದೆ/ಮಗನ ಸಂಬಂಧಗಳನ್ನೊಳಗೊಂಡ ಎಲ್ಲಾ ಹೆಸರುಗಳ ಪಟ್ಟಿ ಮಾಡುವದು ಅವರ ಉದ್ದೇಶವಾಗಿರಲಿಲ್ಲ. ಅವರು ಖಂಡಿತವಾಗಿಯೂ ಐತಿಹಾಸಿಕ ಮತ್ತು ದೈವಶಾಸ್ತ್ರೀಕ ಕಾರಣಗಳಿಗಾಗಿ ಒಂದು ವಂಶಾವಳಿಯಲ್ಲಿರುವ ಪ್ರಮುಖ ವ್ಯಕ್ತಿಗಳ ಬಗ್ಗೆ ಬರೆಯುವವರಾಗಿದ್ದರು, ಆದರೆ ಅನೇಕ ಸಾರಿ ಸೇರಿಸಲ್ಪಟ್ಟ ಸಂಗತಿಗಳಲ್ಲಿ ಸಂಖ್ಯೆಗಳ ಸಾಂಕೇತಿಕ ಬಳಕೆ ಮತ್ತು/ಅಥವಾ ಶೈಲಿಯ ಸಂಬಂಧಿತ ವಿಚಾರಗಳು ಪ್ರಾಮುಖ್ಯವಾದ ಪಾತ್ರವನ್ನ ವಹಿಸಿದ್ದವು.

ಸ್ಪಷ್ಟವಾಗಿರುವ ಪ್ರಕಾರ, ಸಂಖ್ಯೆ "7" ಮತ್ತಾಯ ಹಾಗೂ ಲೂಕ ಇಬ್ಬರಿಗೂ ಮಹತ್ವಪೂರ್ಣವಾಗಿತ್ತು, ಯಾಕೆಂದರೆ ಅವರಿಬ್ಬರೂ ವಂಶಾವಳಿಗಳನ್ನು ಈ ಸಂಖ್ಯೆಗೆ ಮತ್ತು ಅದರ ಗುಣಕಾರಕ್ಕನುಗುಣವಾಗಿ ರಚಿಸಿದ್ದಾರೆ. ಅವರು ಗುರುತಿಸುವ ವಂಶಾವಳಿಗಳ ಸಂಖ್ಯೆಯಲ್ಲಿನ ವ್ಯತ್ಯಾಸಗಳನ್ನು ವಿವಿಧ ಕಾಲಮಾನಗಳಿಗೆ ತಕ್ಕಂತೆ ಅನ್ವಯಿಸಿರುವುದು ತಪ್ಪಾದ ಮಾಹಿತಿಯ ಕಾರಣದಿಂದಾಗಲಿ ಅಥವಾ ನಿರ್ಲಕ್ಷದಿಂದ ಬರೆದಿರುವದರಿಂದಾಗಲಿ ಅಲ್ಲ, ಆದರೆ ಇಬ್ಬರೂ "7" ಸಂಖ್ಯೆಯನ್ನಾಧರಿಸಿ ಗುಂಪುಗಳನ್ನು ಮಾಡುತ್ತಾರೆ.

ಮತ್ತಾಯನು ಉದ್ದೇಶಪೂರ್ವಕವಾಗಿಯೇ ತನ್ನ ಕಥನದಿಂದ ಹೆಸರುಗಳನ್ನು ಕೈ ಬಿಟ್ಟಿರುತ್ತಾನೆ. ಉದಾಹರಣೆಗೆ, ಉಜ್ಜೀಯನು ಯೆಹೋರಾಮನ ಮಗನೋ ಎಂಬಂತೆ ಮತ್ತಾಯ 1:8ರಲ್ಲಿ ಯೆಹೋರಾಮನ ನಂತರದಲ್ಲಿ ತಕ್ಷಣವೇ ಹೆಸರಿಸಲ್ಪಟ್ಟಿರುತ್ತಾನಾದರೂ, ಹಳೆಯ ಒಡಂಬಡಿಕೆಯ ಐತಿಹಾಸಿಕ ಪುಸ್ತಕಗಳು ಯೆಹೋರಾಮ ಮತ್ತು ಉಜ್ಜೀಯನ (ಅಜರ್ಯ ಎಂದು ಸಹ ಕರೆಯಲ್ಪಟ್ಟಿರುತ್ತಾನೆ[20]) ನಡುವಿನ ಕಾಲದಲ್ಲಿ ಮೂವರು ಅರಸರು

ಆಳ್ವಿಕೆ ಮಾಡಿದ್ದರ ಬಗ್ಗೆ ಹೇಳುತ್ತವೆ. ಅನುಪಸ್ಥಿತರಾಗಿರುವ ಅರಸರೆಂದರೆ ಅಹಜ್ಯ, ಯೋವಾಷ (ಅಥವಾ ಯೆಹೋವಾಷ), ಮತ್ತು ಅಮಚ್ಯ (1 ಪೂರ್ವಕಾಲವೃತ್ತಾಂತ 3:11, 12; ನೋಡಿರಿ 2 ಅರಸು 8:24; 12:1; 14:1). NASBಯು ಯೋರಾಮನು "ಉಜ್ಜೀಯನ ತಂದೆ" ಹೇಳಿದರೆ, ASVಯು ಯೋರಾಮನು ಉಜ್ಜೀಯನನ್ನು "ಪಡೆದನು" ಎಂದು ಹೇಳುತ್ತದೆ. ಇದು ಪ್ರಾಚೀನ ಕಾಲದ್ದಾಗಿಯಾದರೂ, ಎರಡನೆಯ ಅನುವಾದವು ಹೆಚ್ಚು ಅಕ್ಷರಶಃವಾಗಿ ಗ್ರೀಕ್ ಕ್ರಿಯಾಪದವಾದ γεννάω (*ಗೆನ್ನಾವೋ*)[21] ಎಂಬುದರ ಅರ್ಥವನ್ನು ಸೆರೆ ಹಿಡಿಯುತ್ತದೆ. ಬೈಬಲ್ ಬಳಕೆಯಲ್ಲಿ, "ಪಡೆದನು" ಎಂಬುದು ಯಾವಾಗಲೂ ತಕ್ಷಣದ ತಂದೆ/ಮಗನ ಸಂಬಂಧವನ್ನು ಸೂಚಿಸುವದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ಇದು ವಾಚಕನಿಗೆ ಸಹಾಯ ಮಾಡುತ್ತದೆ. ಕೆಲವು ಸಾರಿ ಅದು ಕೇವಲ ತನ್ನ ವಂಶದಿಂದ ಹಲವಾರು ವಂಶಗಳಿಂದ ದೂರವಿರುವ ಪೂರ್ವಜನೊಬ್ಬನನ್ನು ಸೂಚಿಸಬಹುದಾಗಿದೆ, ಯೋರಾಮನ ವಿಷಯದಲ್ಲಿ ಇದನ್ನು ಕಾಣುತ್ತೇವೆ, ಈತನು ವಾಸ್ತವಿಕದಲ್ಲಿ ಉಜ್ಜೀಯನ ಮರಿ-ತಾತನಾಗಿದ್ದನು.

ಗ್ರೀಕ್ ಪರಿಭಾಷೆಯು יָלַד (*ಯಾಲಾದ*) ಎಂಬ ಇಬ್ರಿಯ ಪದದೊಂದಿಗೆ ಸಂಬಂಧ ಹೊಂದಿದೆ, ಇದು ಒಬ್ಬ ಮಗನನ್ನು "ಪಡೆದ" ತಂದೆಯನ್ನು ಸೂಚಿಸುವದಕ್ಕೆ ಆದಿಕಾಂಡ ಹಾಗೂ ಹಳೆಯ ಒಡಂಬಡಿಯಲ್ಲಿನ ಇತರ ವಂಶಾವಳಿಗಳಲ್ಲಿ ನಿಯತಕ್ರಮವಾಗಿ ಬಳಸಲ್ಪಡುತ್ತದೆ. ಪುನಃ, ಆ ಪದಗಳ ಅರ್ಥವು ಯಾವಾಗಲೂ ತಕ್ಷಣ ಬರಲಿರುವ ತಲೆಮಾರು ಎಂದಾಗಿರುವದಿಲ್ಲ. Paul R. Gilchristನು ಹೀಗೆ ವಿವರಿಸಿದನು, "ಇಬ್ರಿಯ ಯೋಚನೆಯ ಪ್ರಕಾರವಾಗಿ, ಒಬ್ಬ ವ್ಯಕ್ತಿಯು ಮಗುವೊಂದಕ್ಕೆ ಜನ್ಮ ನೀಡುವ ಮೂಲಕವಾಗಿ ಒಬ್ಬ ಪೋಷಕನಾಗುವನು ಅಥವಾ ಈ ಮಗುವಿನ ಮೂಲಕ ಹುಟ್ಟುವ ಸಂತತಿಯವರಿಗೆಲ್ಲಾ ಮೂಲಪಿತೃವಾಗುವನು."[22] ಇದು ಮತ್ತಾಯನ ಸುವಾರ್ತೆಯಲ್ಲಿರುವ ಪದವಿನ್ಯಾಸದೊಂದಿಗೆ ಸಾಮರಸ್ಯತೆಯಿಂದಿರುತ್ತದೆ, ಆ ಪದವಿನ್ಯಾಸದಿಂದಲೇ ಯೇಸುವು "ಆತನು ದಾವೀದನ ವಂಶದವನು. ದಾವೀದನು ಅಬ್ರಹಾಮನ ವಂಶದವನು" (ಮತ್ತಾಯ 1:1). ಮತ್ತಾಯನ ತಾತ್ಪರ್ಯವು ಯೇಸು ಅಬ್ರಹಾಮನಿಗೆ ಅಥವಾ ದಾವೀದನಿಗೆ ನೇರವಾಗಿ ಜನಿಸಿದವನು ಎಂದಾಗಿರಲಿಲ್ಲ; ಆದರೆ ಇಬ್ಬರಿಗೂ ದೂರದ ಸಂತಾನದವನು ಆಗಿದ್ದನಾದ್ದರಿಂದ, ಅವರು ಆತನಿಗೆ ಪಿತೃಗಳಾಗಿದ್ದರು.

ಮತ್ತಾಯನ ವಂಶಾವಳಿಯು ಇನ್ನೊಬ್ಬ ಅರಸನಾದ ಯೆಹೋಯಾಕೀಮನ ಹೆಸರನ್ನು ಕೈಬಿಟ್ಟಿರುತ್ತದೆ, ಮತ್ತು ಯೆಕೊನ್ಯನನ್ನು ಈತನು ಯೋಷೀಯನ ಮಗನೋ ಎಂಬಂತೆ (ಯೆಹೋಯಾಖೀನ; ಮತ್ತಾಯ 1:11) ಪಟ್ಟಿಯಲ್ಲಿ ಸೇರಿಸುತ್ತದೆ (2 ಅರಸು 23:34; 24:1-6).

ಹಾಗಾದರೆ, ವಂಶಾವಳಿಯೊಂದರಿಂದ ಹೆಸರುಗಳನ್ನು ಕೈ ಬಿಡುವ ಸಂಗತಿಯು ಹಳೆಯ ಹಾಗೂ ಹೊಸ ಒಡಂಬಡಿಕೆಗಳೆಡರಲ್ಲಿಯೂ ಇರುತ್ತದೆ. ಅ ರೀತಿಯಾಗಿ ಹೆಸರನ್ನು ಕೈ ಬಿಡುವದಕ್ಕೆ ಹಳೆಯ ಒಡಂಬಡಿಕೆಯಲ್ಲಿನ ಇನ್ನೊಂದು ಉದಾಹರಣೆಯು ಎಜ್ರನ ಯಾಜಕತ್ವಕ್ಕೆ ಸಂಬಂಧಿಸಿದ ವಂಶಾವಳಿಯಲ್ಲಿ ಕಂಡು ಬರುತ್ತದೆ (ಎಜ್ರನು 7:1-5 ಮತ್ತು 1 ಪೂರ್ವಕಾಲವೃತ್ತಾಂತ 6:3-15ರ ನಡುವೆ ಹೋಲಿಕೆಯನ್ನು ಮಾಡಿರಿ. ಎಜ್ರನ ಪುಸ್ತಕದಲ್ಲಿರುವ ಕಥನದಲ್ಲಿ 1 ಪೂರ್ವಕಾಲವೃತ್ತಾಂತದಲ್ಲಿನ ಕಥನದಲ್ಲಿರುವದಕ್ಕಿಂತ ಕಡಿಮೆ ಹೆಸರುಗಳಿರುತ್ತವೆ, ಇದು ಸೂಚಿಸುವದೇನೆಂದರೆ ಲೇಖಕನು ಎಜ್ರನ ಯಾಜಕೋದ್ಯೋಗ ವಂಶದ ಸಮಗ್ರ ದಾಖಲೆಯ ಬದಲಾಗಿ ಕೇವಲ ಸಂಕ್ಷೆಪವಾದ ಪಟ್ಟಿಯನ್ನು ಮಾತ್ರವೇ ಕೊಡುತ್ತಿದ್ದಾನೆ ಎಂಬುದೆ. ಎಜ್ರನ ಪುಸ್ತಕದಲ್ಲಿರುವ ವಂಶಾವಳಿಯ ಉದ್ದೇಶವು ಆರೋನನ

ತನಕವೂ ಪ್ರತಿಯೊಂದು ತಲೆಮಾರುಗಳ ದಾಖಲೆಯನ್ನು ಬರೆಯುವದು ಆಗಿರಲಿಲ್ಲ, ಆದರೆ ಈತನನ್ನು ಪ್ರಥಮ ಮಹಾ ಯಾಜಕನ ವಂಶದಿಂದ ನೇರವಾಗಿ ಬಂದವನು ಎಂಬುದನ್ನು ಪ್ರಾಮಾಣೀಕರಿಸುವದೇ ಆಗಿತ್ತು. ಆ ಪ್ರಕಾರವಾಗಿ, ಎಜ್ರನು ದೇವರ ಯಾಜಕನಾಗಿ ನಡೆದುಕೊಂಡು ಕ್ರಿ.ಪೂ. 458ರಲ್ಲಿ ಯೆರೂಸಲೇಮಿನೊಳಗಿನ ಸೆರೆವಾಸ ನಂತರದ ಸಮುದಾಯದಲ್ಲಿ ಅಗತ್ಯವಿರುವ ಸುಧಾರಣೆಗಳನ್ನು ತರುವದಕ್ಕಾಗಿ ಹಕ್ಕನ್ನು ನಿರ್ವಹಿಸಿದನು.[23]

*ಮುಕ್ತಾಯ.* ತಿಳಿಸಲಾಗಿರುವ ಆ ವಿಧವಾದ ಅಂತರಗಳಂತಹ ಇನ್ನೂ ಕೆಲವು ಅಂಶಗಳು ಸಹ ಆದಿಕಾಂಡ ಪುಸ್ತಕದಲ್ಲಿರುವ ವಂಶಾವಳಿಗಳೊಳಗೆ ಇರಬಹುದಾಗಿದೆ. ಈ ಆರಂಭಿಕ ಕಥನಗಳ ಮೂಲಕವಾಗಿ ಭೂಮಿಯು ಎಷ್ಟು ವರ್ಷದಿಂದ ಇರುತ್ತದೆಂಬ ಕಾಲವನ್ನು ಪ್ರಕಟಗೊಳಿಸುವಂಥ ವಿವಾದಾತೀತವಾದ ಕಾಲಾನುಕ್ರಮವನ್ನು ಸಾಭಿತುಪಡಿಸುವದು ಸಂದೇಹಕರವಾಗಿರುತ್ತದೆ. ಬರವಣಿಗೆಯು ಸರ್ವಸಾಧಾರಣವಾಗಿ ಬಳಕೆಗೆ ಬರುವ ಬಹಳ ಕಾಲದ ಮುಂಚೆಯೇ, ಜನರು ತಮ್ಮ ಪೂರ್ವಜರ ಹೆಸರುಗಳನ್ನು ಕಂಠಪಾಠ ಮಾಡಿಕೊಳ್ಳುತ್ತಿದ್ದರು.[24] ಕಾಲವು ಗತಿಸಿದ ಹಾಗೆ, ಪಟ್ಟಿಯು ಬಹಳ ದೊಡ್ಡದಾಗುತ್ತಾ ಹೋದ ಕಾರಣ ಅವರು ಪ್ರಮುಖ ವ್ಯಕ್ತಿಗಳನ್ನಷ್ಟೆ ಅದರಲ್ಲಿ ಸೇರಿಸಿಕೊಳ್ಳುತ್ತಿದ್ದರು. ಜನರು ಬರೆದ ದಾಖಲೆಗಳನ್ನು ಇಟ್ಟುಕೊಳ್ಳಲು ಆರಂಭಿಸಿದಾಗ, ದೇವರು ಆ ಆರಂಭಿಕ ಕಥನಗಳನ್ನು ಸಂರಕ್ಷಿಡುವಂತೆ ಮೋಶೆ ಅಥವಾ ಬೇರೊಬ್ಬರನ್ನು ಪ್ರೇರಿಸಿದನು. ಅವುಗಳಲ್ಲಿ ಸಹ ಅನೇಕ ಅಂತರಗಳಿದ್ದಿರಬಹುದಾಗಿದೆ, ಹಳೆಯ ಒಡಂಬಡಿಕೆಯ ಅನಂತರದಲ್ಲಿ ಕಥನಗಳಲ್ಲಿ ಮತ್ತು ಹೊಸ ಒಡಂಬಡಿಕೆಯಲ್ಲಿ ಸಹ ಅವುಗಳು ಸಹಜವಾಗಿದ್ದವು. ಹೇಗೂ, ಇತಿಹಾಸದಲ್ಲೆಲ್ಲಾ ದೇವರು ಉದ್ದೇಶದ ಎಳೆಯು ಸಾಗಿ ಬಂದಿರುವದನ್ನು ನಾವು ಕಾಣುವಂತೆ ಸಾಕಾಗುವಷ್ಟು ಸಂರಕ್ಷಿಸಿಡಲ್ಪಟ್ಟಿದೆ. ಅದು ಪ್ರಥಮ ಮನುಷ್ಯನಿಂದ ಮೊದಲ್ಗೊಂಡು ಅಸಂಖ್ಯಾತ ತಲೆಮಾರುಗಳನ್ನು ಹಾಯ್ದು ವಾಗ್ದಾನ ಮಾಡಲ್ಪಟ್ಟ "ಸಂತಾನ" (3:15) ಆಗಿರುವ ಕ್ರಿಸ್ತನ ಬರೋಣದ ಸಾಗುತ್ತದೆ. ನಮ್ಮ ಮುಂದೆ ಕೆಲವೊಂದು ಹೆಸರುಗಳನ್ನು ಕಣ್ಮರೆಯಾಗಿ ದಾರಿಯಲ್ಲಿ ಅಂತರಗಳಿದ್ದಾಗ್ಯೂ, ನಮ್ಮ ನಂಬಿಕೆಯನ್ನು ಕುಂದಿಸುವಂಥ ಯಾವ ಸಂಗತಿಯೂ ಕಳೆದು ಹೋಗಿರುವದಿಲ್ಲ. ಅಂತಿಮ ವಿಶ್ಲೇಷಣೆಯಲ್ಲಿ "ಇತಿಹಾಸವು ಇತಿಹಾಸವೇ" ಎಂಬುದು ನಮಗೆ ಗೊತ್ತಾಗುವಂತೆ ಪ್ರಾಮುಖ್ಯವಾದ ಹೆಸರುಗಳು ಮತ್ತು ಘಟನೆಗಳು ಸಂರಕ್ಷಿಸಿಡಲ್ಪಟ್ಟಿವೆ. ಆ ಕಥೆಯು ಯುಗಗಳ ಸಮಾರೋಪದ ಕಡೆಗೆ ಸಾಗುತ್ತಿದೆ, ಆಗ ದೇವರು ಯೇಸು ಕ್ರಿಸ್ತನಲ್ಲಿ ಸಮಸ್ತವನ್ನು ಒಗ್ಗೂಡಿಸುವನು (ಎಫೆಸ 1:10).

## ಪ್ರಥಮ ಮನುಷ್ಯರ ಕುರಿತಾದ ಕ್ಲುಪ್ತ ಕಥನಗಳು (ಅಧ್ಯಾಯ 5)

ಹನೋಕನ ಕಥನದ ಹೊರತಾಗಿ, 5ನೇ ಅಧ್ಯಾಯವು ಕಲಿಯುವದಕ್ಕೆ ಹೆಚ್ಚಿನದೇನನ್ನೂ ನೀಡುವಂತೆ ಕಾಣಿಸದಿರಬಹುದು. ಅದರಲ್ಲಿರುವ ವಿಷಯವು ಪುನರಾವರ್ತಿತವಾದದ್ದು ಮತ್ತು ಆರಂಭದಲ್ಲಿ ಕೇವಲ ಹೆಸರುಗಳ ಮತ್ತು ವಯಸ್ಸುಗಳ ಪಟ್ಟಿ ಎಂಬಂತೆ ಮಾತ್ರವೇ ತೋರಬಹುದು. ಹೇಗೂ, ಇನ್ನಷ್ಟು ಆಳವಾಗಿ ಅವಲೋಕಿಸಿದಾಗ, ಈ ವಂಶಾವಳಿಯ ಕುರಿತಾಗಿ ವಾಚಕನು ಕೆಲವೊಂದು ಪ್ರಾಮುಖ್ಯವಾದ ಅಂಶಗಳನ್ನು ಗುರುತಿಸಬಹುದಾಗಿದೆ.

*ಈ ದಿನದಲ್ಲಿರುವಂತೆಯೇ, ಜನರು ಮರಣವನ್ನು ಎದುರಿಸಿದರು.* ಹನೋಕನನ್ನು ಹೊರತು ಪಡಿಸಿ, ಈ ಅಧ್ಯಾಯದಲ್ಲಿ ಪಟ್ಟಿ ಮಾಡಲಾಗಿರುವ ಎಲ್ಲಾ ವ್ಯಕ್ತಿಗಳು ಏಳು ನೂರರಿಂದ ಒಂದು ಸಾವಿರ ವರ್ಷಗಳೊಳಗೆ ಬದುಕಿದರು. ಅಂಥ ದೀರ್ಘಾಯುಷ್ಯವು ನಿಶ್ಚಯವಾಗಿಯೂ ವಿಶೇಷ ಕಾರಣಗಳಿಗೋಸ್ಕರ ದೇವರಿಂದ ವಿನ್ಯಾಶಿಸಲ್ಪಟ್ಟಿತ್ತು.

ಮೊದಲನೆಯದಾಗಿ, ಇದರಿಂದ ಮಾನವರಿಗೆ ಸಂತಾನೋತ್ಪತ್ತಿ ಮಾಡಿ ಭೂಮಿಯಲ್ಲೆಲ್ಲಾ ತುಂಬಿಕೊಳ್ಳಲು ಸಹಾಯವಾಗಿತ್ತು, ಇದು "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" (1:28) ಎಂಬುದಾಗಿ ಅವರಿಗೆ ಕೊಡಲ್ಪಟ್ಟಿದ್ದ ಮೊದಲನೆಯ ಆಜ್ಞೆಗನುಸಾರವಾಗಿತ್ತು. ಎರಡನೆಯದಾಗಿ, ಸುದೀರ್ಘವಾದ ಆಯುಷ್ಕಾಲಗಳು ದೇವರು ಮನುಷ್ಯನಿಗೆ ಮೌಖಿಕವಾಗಿ ಮಾತಾಡುವದನ್ನು ಹೆಚ್ಚಿಗುವಂತೆ ಮಾಡಿದ್ದವು. ಬರವಣಿಗೆಯ ಮೊದಲ ಪುರಾವೆಯು ದಕ್ಷಿಣ ಮೆಸಪೋತಾಮ್ಯದ ಪ್ರಾಚೀನ ಸುಮೆರದಲ್ಲಿ ಸಿಕ್ಕಿರುವದಾಗಿದೆ (ಕ್ರಿ.ಪೂ. 3300)[25]; ಆದ್ದರಿಂದ, ಆದಾಮನು ಮರಣ ಹೊಂದಿದ ಕಾಲದಿಂದ ಮನುಷ್ಯರು ಬರೆಯುವದಕ್ಕಾರಂಭಿಸಿದ ಸಮಯದ ವರೆಗಿನ ದೀರ್ಘ ಕಾಲಾವದಿಯಿಂದ ದೇವರು ಮನುಷ್ಯನಿಗೆ ನೀಡಿದ ಪ್ರಕಟನೆಯನ್ನು ಮುಂದಿನ ತಲೆಮಾರಿನವರಿಗೆ ಬಾಯಿಂದ ಹೇಳಿ ಕಲಿಸಿ ಕೊಡುವ ಮೂಲಕ ಸಂರಕ್ಷಿಸಿಡಬೇಕಾಗಿತ್ತು. ಆ ಯುಗಗಳ ವೇಳೆ, ಜನಸಂಖ್ಯೆಗಳು ಅಧಿಕಗೊಂಡವು, ಅನ್ವೇಷಣೆಗಳು ಮಾಡಲ್ಪಟ್ಟವು, ಮತ್ತು ಸಾಂಸ್ಕೃತಿಕವಾಗಿ ಮುನ್ನಡೆಗಳನ್ನು ಸಾಧಿಸಲಾಯಿತು (ನೋಡಿರಿ 4:17-22); ಆದರೆ ಮುಂಬರುವ ತಲೆಮಾರುಗಳಿಗೋಸ್ಕರ ಈ ಮಾಹಿತಿಯನ್ನು ಬರೆದಿಡುವದಕ್ಕೆ ಯಾವ ಇತಿಹಾಸಕಾರರೂ ಇರಲಿಲ್ಲ. ಆರಂಭಿಕ ಮನುಷ್ಯರ ದೀರ್ಘಾಯುಷ್ಯವು ಇಂದು ಯಾವ ಉದ್ದೇಶಕ್ಕಾಗಿ ಪುಸ್ತಕಗಳು ಇರುತ್ತವೋ ಆ ಉದ್ದೇಶವನ್ನು ನೆರವೇರಿಸಿತ್ತು: ವಯಸ್ಸಾದ ಮನುಷ್ಯರು ತಮ್ಮ ಮಕ್ಕಳಿಗೆ, ಮೊಮ್ಮಕ್ಕಳಿಗೆ, ಮತ್ತು ಮರಿಮೊಮ್ಮಕ್ಕಳಿಗೆ ತಾವು ಕಣ್ಣಾರೆ ಕಂಡಿದ್ದ ಘಟನೆಗಳ ಕುರಿತು ಮತ್ತು ತಮಗೆ ಪೂರ್ವಜರು ಪ್ರಕಟಗೊಳಿಸಿದ್ದ ಎಲ್ಲವನ್ನೂ ತಿಳಿಸಿ ಕೊಡುತ್ತಿದ್ದರು.

ಹೇಗೂ, ದೀರ್ಘಾಯುಷ್ಯವು ಮನುಷ್ಯನ ಭ್ರಷ್ಟತೆಯಲ್ಲಿ ಸಹ ಕೊಡುಗೆಯನ್ನು ನೀಡಿರಬಹುದಾಗಿದೆ. ನ್ಯಾಯವು ಅನೇಕ ವರ್ಷಗಳ ವರೆಗೆ ಸಿಕ್ಕದೆ ಹೋದಾಗ, ದಂಡನೆಯು ನಿರೋಧಕ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಅದನ್ನು ಎಷ್ಟು ದೀರ್ಘ ಕಾಲದ ತನಕ ಮುಂದೂಡಲಾಗುತ್ತದೋ, ಅಷ್ಟು ಅಧಿಕವಾಗಿ ಅಪರಾಧಿಗಳು ತಾವು ಎಂದಿಗೂ ಅದನ್ನು ಎದುರಿಸುವದಿಲ್ಲ ಎಂದು ಯೋಚಿಸುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಾರೆ. ಮರಣದ ಭಯವು, ವಿಶೇಷವಾಗಿ ಮರಣವು ಬಹಳ ಸಮೀಪವಾಗಿರುವಂಥ ಸಂದರ್ಭದಲ್ಲಿ ಅದು ಅತಿ ಕೆಟ್ಟ ಜನರನ್ನು ಸಹ ನಿಗ್ರಹಿಸಿಕೊಳ್ಳುವಂತೆ ಮಾಡುತ್ತದೆ. ಹೆರೋದರು, ನಿರೋಗಳು, ನೆಪೋಲಿಯನ್ನರು, ಹಿಟ್ಲರಗಳು, ಮತ್ತು ಸ್ಟಾಲಿನ್ನರಂತವರು ಹೆಚ್ಚುಕಡಿಮೆ ಸಾವಿರು ವರ್ಷಗಳ ಕಾಲ ಜೀವಿಸಿ ತಮ್ಮ ಅನಾಗರೀಕ ರೀತಿಗಳಲ್ಲಿನ ಆಳ್ವಿಕೆ ಮಾಡುವಂತೆ ಮರಣವು ಅನುಮತಿಸಲಿಲ್ಲ ಎಂಬುದಕ್ಕೋಸ್ಕರ ಕೃತಜ್ಞತೆಯುಳ್ಳವರಾಗುವಂತೆ ಅದು ನಮಗೆ ಕಲಿಸಬಲ್ಲದು.

ಆದಿಕಾಂಡ 5ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಬಹುಪಾಲು ಮನುಷ್ಯರು, ಈ ಮುಂಚೆ ಪ್ರಸ್ತಾಪಿಸಲ್ಪಟ್ಟಿದ್ದ ಕಾಯಿನ ಮತ್ತು ಲೆಮೆಕರಂತೆ ಕೊಲೆಗಾರರಾಗಿರಲಿಲ್ಲ; ಆದರೆ ಅವರು ಪಾಪಿಗಳಾಗಿದ್ದರು. ಆದದರಿಂದ, ಅವರು ಅನೇಕ ವರ್ಷಗಳ ಕಾಲ ಬದುಕಿದರಾದರೂ, ಹನೋಕನನ್ನು ಹೊರತು ಪಡಿಸಿ ಅವರೊಬ್ಬೊಬ್ಬರ ಕುರಿತಾಗಿಯೂ, "... ಸತ್ತನು" ಎಂದು ಹೇಳಲಾಗಿರುತ್ತದೆ. ಈ ಸತ್ಯವು ನಮ್ಮನ್ನು ದೀನರನ್ನಾಗಿಸತಕ್ಕದ್ದು ಮತ್ತು ಈ ಶಾರೀರಿಕ ಜಗತ್ತಿನಲ್ಲಿ ಮರಣವು ಸಕಲ ಮಾನವರ ಮೇಲೆ ದೊರೆತನ ಮಾಡುತ್ತದೆ ಎಂಬುದನ್ನು ಗ್ರಹಿಸಿಕೊಳ್ಳುವಂತೆ ನಮ್ಮನ್ನು ನಡಿಸತಕ್ಕದ್ದು (ನೋಡಿರಿ ರೋಮಾ 5:21). ದುಷ್ಟರು ಮಾತ್ರವೇ ಸಾಯುವವರಲ್ಲ; "ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ

ಮನುಷ್ಯರಿಗೆ ಹೇಗೆ ನೇಮಕವಾಗಿದೆ" (ಇಬ್ರಿಯ 9:27). ಮರಣವು ತನ್ನ ಕೆಲಸವನ್ನು ವಿಳಂಬ ಮಾಡಬಹುದು, ಆದರೆ ಅಂತಿಮವಾಗಿ ಅದು ಎಲ್ಲರ ಮೇಲೆಯೂ ತನ್ನ ಹಾನಿಯನ್ನು ಬರಮಾಡುವದು. ಎಷ್ಟು ಹಣವಾಗಲಿ ಅಥವಾ ಅಧಿಕಾರವಾಗಲಿ ಇದ್ದರೂ ಅದನ್ನು ತಪ್ಪಿಸಿಕೊಳ್ಳಲಾಗದು.

*ಈ ದಿನವಿರುವಂತೆಯೇ, ಬಹುಪಾಲು ಜನರು ಮರೆಯಲ್ಪಟ್ಟಿದ್ದರು.* ಆದಾಮ ಮತ್ತು ಹವ್ವಳು, ಕಾಯಿನ ಮತ್ತು ಹೇಬೆಲ, ಹಾಗೂ ಕಾಯಿನನ ಸಂತತಿಯವರ ಕಥೆಗಳನ್ನು ಹೊರತು ಪಡಿಸಿ (ಆದಿಕಾಂಡ 2-4), ನಮಗೆ ಲಭ್ಯವಿರುವ ಪ್ರಳಯ-ಪೂರ್ವ ಯುಗದಲ್ಲಿನ ಮಾನವ ಇತಿಹಾಸದ ಮಾಹಿತಿಯೆಲ್ಲವೂ ಆದಿಕಾಂಡ 5 ಮತ್ತು 6 ಅಧ್ಯಾಯಗಳಲ್ಲಿ ಇರುತ್ತದೆ. ಈ ಬಹುಪಾಲು ಇತಿಹಾಸವು ಅನೇಕ ಯುಗಗಲ ವರೆಗಿನ ವಂಶಾವಳಿಗಳನ್ನು ಒಳಗೊಂಡಿರುತ್ತದೆ.

ಪ್ರಳಯ-ಪೂರ್ವ ತಲೆಮಾರಿನ ಕುರಿತಾಗಿ ಮಾಹಿತಿಯ ಕೊರತೆಗೆ ಇರುವ ಕಾರಣಗಳಲ್ಲೊಂದು ಎಂದರೆ ಆಗ ಬರೆದಿಡುವದಕ್ಕೆ ಯೋಗ್ಯವಾದದ್ದು ಬಹಳ ಕಡಿಮೆಯೇ ಇದ್ದಿರಬಹುದಾಗಿದೆ. ಬಹುಪಾಲು ಜನರು ಕೇವಲ ಬದುಕುತ್ತಿದ್ದರು, ಮದುವೆ ಮಾಡಿಕೊಳ್ಳುತ್ತಿದ್ದರು, ಮಕ್ಕಳನ್ನು ಪಡೆಯುತ್ತಿದ್ದರು, ಹೆಚ್ಚೆಚ್ಚು ದುಷ್ಟರಾಗುತ್ತಾ ಹೋದರು, ಹಾಗೂ ಮರಣಿಸಿದರಷ್ಟೇ. ಆದಿಕಾಂಡದ ಉದ್ದೇಶವು ಇಡೀ ಮಾನವ ಜನಾಂಗದ ಸಮಗ್ರವಾದನ ಇತಿಹಾಸವನ್ನು ಮುಂದಿಡುವಿಕೆಯಾಗಿರಲಿಲ್ಲ; ಬದಲಾಗಿ, ಸೃಷ್ಟಿಯ ಕಥೆ, ಮೂಲ ದಂಪತಿಗಳ ಬೀಳುವಿಕೆ, ಮತ್ತು ಅವರ ಸಂತಾನದವರೊಳಗೆ ಪಾಪ ಹಾಗೂ ಮರಣಗಳು ಆಳ್ವಿಕೆಯನ್ನು ನಡಿಸಿದ್ದರ ಕುರಿತಾಗಿ ಕ್ಲುಪ್ತವಾಗಿ ವಿವರಣೆಯನ್ನು ನೀಡುವದೇ ಅದರ ಉದ್ದೇಶ ಆಗಿತ್ತು. ಅಲ್ಲದೆ ಅದು ನ್ಯಾಯತೀರ್ಪಿನ ನಡುವೆಯೂ ದೇವರ ಕೃಪೆಯು ತೋರಿ ಬಂದದ್ದನ್ನು ಸ್ಪಷ್ಟವಾಗಿ ಗುರುತಿಸುವಂತೆ ರಚಿಸಲ್ಪಟ್ಟಿರುತ್ತದೆ, ಯಾಕೆಂದರೆ ಯೆಹೋವನು ಹೇಳಲಾಗದಷ್ಟು ತಲೆಮಾರುಗಳ ವರೆಗೂ ಸ್ತ್ರೀಯ "ಸಂತಾನ"ವನ್ನು ಆಶೀರ್ವದಿಸುತ್ತಲೇ ಇದ್ದನು (3:15). ಈ ಆಶೀರ್ವಾದಗಳು ಸೇತ, ಹನೋಕ, ಮತ್ತು ನೋಹನ ಜೀವಿತಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದ್ದವು. ಅವರು ಅಬ್ರಹಾಮ, ಇಸಾಕ, ಮತ್ತು ಯಾಕೋಬರ ಸಂತತಿಯವರಲ್ಲಿ ಹೆಚ್ಚು ವಿಶಿಷ್ಟವಾದ ಸಂತಾನದವರಾದರು (ಗಲಾತ್ಯ 3:8-29).

ಕೆಲವೇ ವರ್ಷಗಳೊಳಗೆ, ಅಥವಾ ಅವರ ಮರಣವಾಗಿ ಕೆಲವು ತಲೆಮಾರುಗಳೊಳಗೆ, ಮಾನವ ಜನಾಂಗದ ಬಹುಪಾಲು ಸದಸ್ಯರ ನೆನಪು ಒಂದು ಕನಸಿನಂತೆ ಮಾಯವಾಗಿತ್ತು, ಯಾರಿಂದಲೂ ಹೇಳಲ್ಪಡದ್ದಾಗಿ ಮತ್ತು ಮರೆತು ಹೋಗಲ್ಪಟ್ಟದ್ದಾಗಿ ಹೋಗಿತ್ತು. ಜ್ಞಾನಿಯು ಹೀಗೆ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ, "ವ್ಯರ್ಥವೇ ವ್ಯರ್ಥ, ಸಮಸ್ತವೂ ವ್ಯರ್ಥ" (ಪ್ರಸಂಗಿ 1:2). ಆತನು ಹೀಗೆ ವಾದಿಸಿದನು,

> ... ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ; ಅವರಿಗೆ ಇನ್ನು ಮೇಲೆ ಪ್ರತಿಫಲವೇನೂ ಇಲ್ಲ, ಅವರ ಜ್ಞಾಪಕವೇ ಹೋಯಿತಲ್ಲವೆ. ಅವರು ಸತ್ತಾಗಲೇ ಅವರ ಪ್ರೀತಿಯೂ ಹಗೆಯೂ ಹೊಟ್ಟೇಕಿಚ್ಚೂ ಅಳಿದುಹೋದವು; ಲೋಕದೊಳಗೆ ನಡೆಯುವ ಯಾವ ಕೆಲಸದಲ್ಲಿಯೂ ಅವರಿಗೆ ಇನ್ನೆಂದಿಗೂ ಪಾಲೇ ಇಲ್ಲ (ಪ್ರಸಂಗಿ 9:5, 6).[26]

ಹೆಚ್ಚುಕಡಿಮೆ ಎಲ್ಲಾ ಮಾನವರಿಗೂ ಇದೇ ಫಲಿಯವಾಗಿರುವದು ಸ್ಪಷ್ಟವಾಗಿದೆ, ಮತ್ತು ಆದಿಕಾಂಡ 5ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಎಲ್ಲಾ ವ್ಯಕ್ತಿಗಳ ವಿಷಯದಲ್ಲಿಯೂ ಇದು

ಸತ್ಯವಾಗಿರುತ್ತದೆ. ಶಾಸ್ತ್ರಗಳಲ್ಲಿ ಮಾಡಲ್ಪಟ್ಟಿರುವ ಹೆಸರುಗಳ ಪಟ್ಟಿಯು ನಮ್ಮ ಶಾರೀರಿಕ ಜೀವಿತಗಳು ಕೇವಲ ಕ್ಷಣಿಕ, ಮತ್ತು ಲೋಕದ ಇತಿಹಾಸದ ಮೇಲೆ ನಮ್ಮಲ್ಲಿ ಕೆಲವರು ಮಾತ್ರವೇ ಶಾಶ್ವತವಾದ ಪ್ರಭಾವವನ್ನು ಬೀರುತ್ತೇವೆ ಎಂಬ ವಾಸ್ತವಿಕ ಸತ್ಯವನ್ನು ನೆನಪಿಸುತ್ತದೆ.

ನಂಬಿಗಸ್ತರು ದೇವರಿಂದ ಮರೆತು ಹೋಗಲ್ಪಡುವ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. "ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆ" (2 ತಿಮೊಥೆ 2:19). ಆತನಿಗೆ ವಿಧೇಯರಾಗಿರುವವರೆಲ್ಲರ ಹೆಸರುಗಳು "ಜೀವಬಾಧ್ಯರ ಪಟ್ಟಿಯಲ್ಲಿ" ಬರೆಯಲ್ಪಟ್ಟಿರುತ್ತವೆ (ಫಿಲಿಪ್ಪಿ 4:3; ಪ್ರಕಟನೆ 20:12-15). ಆ ಪರಲೋಕದ ದಾಖಲೆಯ ಪುಸ್ತಕದಲ್ಲಿ ಸೇರ್ಪಡೆಗೊಂಡಿರುವವರು ಕರ್ತನನ್ನು ಪ್ರೀತಿಸಿ ಈ ಜೀವಿತದಲ್ಲಿ ಆತನನ್ನು ಮಹಿಮೆ ಪಡಿಸಿರುವಂಥ ಜನರಾಗಿರುವರು. ಇವರು ತಮ್ಮ ಸುತ್ತಲಿನ ಜನರ ಜೀವಿತಗಳಲ್ಲಿ ಒಂದು ವ್ಯತ್ಯಾಸವನ್ನುಂಟು ಮಾಡಿರುವವರು, ಬೇರೆಯವರ ಸೇವೆ ಮಾಡಿ ಅವರಿಗೆ ದೇವರ ಹೆಸರಿನಲ್ಲಿ ಚಾಕರಿ ಮಾಡಿರುವವರು ಆಗಿರುತ್ತಾರೆ. ಅವರು ಒಂದು ಆನಂದಕರವಾದ ಶಬ್ದವನ್ನು ಕೇಳಿಸಿಕೊಳ್ಳುವವರಾಗಿ ಯೇಸುವು ಹೀಗೆ ಹೇಳುವದನ್ನು ಆಲಿಸುವರು, "ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು; ... ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು" (ಮತ್ತಾಯ 25:21); "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 25:40).

*ಈ ದಿನದಲ್ಲಿರುವಂತೆ, ಒಂದು ಜೀವಿತವು ವ್ಯತ್ಯಾಸವೊಂದನ್ನು ಉಂಟು ಮಾಡಿತ್ತು.* ದೇವರು ವಂಶಾವಳಿಯ ಪಟ್ಟಿಯಲ್ಲಿ ಹನೋಕನ ಜೀವಿತಕ್ಕೆ ಏಕೆ ವಿಶೇಷವಾದ ಮಹತ್ವವನ್ನು ನೀಡಿದನು? ಮೊದನೆಯದಾಗಿ, ಹನೋಕನು ತನ್ನ ಬೋಧನೆಯ ಮೂಲಕವಾಗಿ ಲೋಕಕ್ಕೆ ಉಪದೇಶಿಸಿದನು, ಅದು ಯೆಹೋವನು ದುಷ್ಟರಿಗೆ ನ್ಯಾಯತೀರಿಸುವವನಾಗಿ ಬರುವನು ಎಂಬುದನ್ನು ಒತ್ತಿ ಹೇಳುವದಾಗಿತ್ತು (ಯೂದನು 14, 15).[27] ದೇವರ ಬಯಕೆಯು ಪ್ರಮುಖವಾಗಿ ನಾಶ ಮಾಡಬೇಕು ಎಂಬುದಲ್ಲ, ಆದರೆ ಭಕ್ತಿಹೀನರಲ್ಲಿ ಅವರ ಪಾಪದ ಅರುಹು ಹುಟ್ಟಿಸಿ ಅವರನ್ನು ಪಶ್ಚಾತ್ತಾಪಕ್ಕೆ ನಡಿಸುವದೇ ಆಗಿರುತ್ತದೆ (2 ಪೇತ್ರ 3:9, 10).

ಎರಡನೆಯದಾಗಿ, ಆತನು ಲೋಕಕ್ಕೆ ತನ್ನ ಜೀವಿತದ ಮೂಲಕವಾಗಿ ಉಪದೇಶಿಸಿದನು, ಅದನ್ನು ಲೇಖಕನು ಹೀಗೆ ಸಾರಾಂಶಗೊಳಿಸಿದನು: "ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡನು" (5:22, 24). ಒಬ್ಬಬ್ಬನ ಬೋಧನೆಯನ್ನು ಪರಿಣಾಮಕಾರಿ ಮಾಡುವದಕ್ಕೆ ನಂಬಿಕೆ, ಪ್ರಾಮಾಣಿಕತೆ, ಮತ್ತು ಶುದ್ಧತೆಯಲ್ಲಿ ಜೀವಿಸಿದ ಒಂದು ಜೀವನವು ಅಗತ್ಯವಿರುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ ಹನೋಕನು "ಒಯ್ಯಲ್ಪಡುವದಕ್ಕಿಂತ ಮೊದಲು ದೇವರಿಗೆ ಮೆಚ್ಚಿಕೆಯಾದವನಾಗಿದ್ದನೆಂದು ಸಾಕ್ಷಿ ಉಂಟು" (ಇಬ್ರಿಯ 11:5). ಆತನ ಸುತ್ತುವರೆದಿದ್ದ ಲೋಕದ ದುಷ್ಟತ್ವ ಮತ್ತು ಅಂಧಕಾರಗಳಿಗೆ ತದ್ವಿರುದ್ಧವಾಗಿ, ಆತನ ನಿರ್ಮಲವಾದ ಬದುಕು ಮತ್ತು ಸತ್ಕಾರ್ಯಗಳು ದೇವರ ಮಹಿಮೆಯನ್ನು ಪ್ರಕಾಶಗೊಳಿಸಿದ ಒಂದು ಸಂಜ್ಞಾಜ್ಯೋತಿಯಂತೆ ಇದ್ದವು (ನೋಡಿರಿ ಮತ್ತಾಯ 5:16).

ಮೂರನೆಯದಾಗಿ, ಹನೋಕನು ಭೂಲೋಕದ ಜೀವಿತವನ್ನು ಹೇಗೆ ತೊರೆದು ಹೋದನು ಎಂಬುದರ ಮೂಲಕವಾಗಿ ಲೋಕಕ್ಕೆ ಉಪದೇಶವನ್ನು ಮಾಡಿದ್ದನು. ಆದಿಕಾಂಡದ ಲೇಖಕನು "ದೇವರು ಅವನನ್ನು ಕರೆದುಕೊಂಡದ್ದರಿಂದ" (5:24) ಎಂದಷ್ಟೆ ಬರೆಯುತ್ತಾನೆ, ಮತ್ತು

ಇಬ್ರಿಯರಿಗೆ ಪತ್ರಿಕೆಯ ಲೇಖಕನು ದೃಢಪಡಿಸಿದ್ದೇನೆಂದರೆ ಆತನು "ಒಯ್ಯಲ್ಪಟ್ಟನು" (ಇಬ್ರಿಯ 11:5). ಪ್ರಳಯಕ್ಕೆ ಪೂರ್ವದಲ್ಲಿನ ತಲೆಮಾರುಗಳ ಪಾಪ-ಗ್ರಸ್ಥವಾದ ಅಂಧಕಾರದಲ್ಲಿ, ಮಾನವ ಅಂತಿಮ ಗತಿಯು ಕೇವಲ ಶ್ರಮೆ, ನಿರಾಶೆ, ಮತ್ತು ಮರಣಗಳಿಂದ ಮಾತ್ರವೇ ಕೂಡಿರುವ ಅಗತ್ಯವಿಲ್ಲ ಎಂಬುದನ್ನು ತಿಳಿಯುವದು ಅಗತ್ಯವಿತ್ತು. ದೇವರು ಹನೋಕನನ್ನು ಕರೆದುಕೊಂಡದ್ದು ಈ ಜೀವನಾದಾಚೆಯಲ್ಲಿ ನಮಗೋಸ್ಕರ ಒಂದು ಅಸ್ತಿತ್ವದ ಮಂಡಲವು ಕಾದಿರುತ್ತದೆ ಎಂಬ ವಾಸ್ತವಾಂಶಕ್ಕೆ ಸಾಕ್ಷಿಯಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ಅದು ವಿಶ್ವದ ದೇವರು ಒಳ್ಳೇತನವನ್ನು ಅನುಮೋದಿಸುತ್ತಾನೆ ಮತ್ತು ತನ್ನ ಚಿತ್ತದೊಂದಿಗೆ ಸಾಮರಸ್ಯದಿಂದ ಬದುಕಲು ಶ್ರಮಿಸುವವರನ್ನು ಸನ್ಮಾನಿಸುತ್ತಾನೆ ಎಂಬ ಸತ್ಯಕ್ಕೆ ಸಾಕ್ಷಿಯಾಗಿತ್ತು. ಅಂತಿಮವಾಗಿ, ದೇವರು ಕಾಯಿನನಿಗೆ 4:7ರಲ್ಲಿ ಬುದ್ಧಿವಾದ ಹೇಳಿದ ಪ್ರಕಾರ, ಪಾಪವನ್ನು ವಶಪಡಿಸಿಕೊಳ್ಳಲು ಶ್ರಮಿಸುವದು ದೈವಿಕ ಮನ್ನಣೆಯನ್ನು ಗಳಿಸುವದಕ್ಕೆ ಮತ್ತು ಕರ್ತನೊಂದಿಗೆ ನಿತ್ಯತ್ವವನ್ನು ಕಳೆಯುವ ಅಮೋಘ ಅಂತ್ಯಸ್ಥಿತಿಯನ್ನು ಪಡೆಯುವ ದಾರಿಯಾಗಿರುತ್ತದೆ ಎಂಬ ಗಹನವಾದ ನಿರೂಪಣೆಯನ್ನು ನೀಡಿತ್ತು.

---

ಅಡಿಟಿಪ್ಪಣಿಗಳು

[1]*ಸೆಫೆರ* ಎಂಬುದರ ಪ್ರಾಥಮಿಕ ಅರ್ಥವು ಒಂದು "'ದಸ್ತಾವೇಜು,' ಅಂದರೆ, ಒಂದು ಬರೆದ ಸಾಮಗ್ರಿಯ ತುಂಡು ... ಅದರ ಮೇಲೆ ಏನೋ ಬರೆಯಲಾಗಿರುತ್ತದೆ." ಆರಂಭಿಕ ಕಾಲಗಳಲ್ಲಿ, ಅದರರ್ಥವು ಕಲ್ಲಿನ ಮೇಲಿನ ಒಂದು ಕೆತ್ತಿದ ಬರಹ, ಪಾಪೀರಸ್ ಅಥವಾ ವೆಲ್ಲುಮ್ (ಚರ್ಮ) ಮೇಲೆ ಬರೆದ ಬರಹ ಎಂದಾಗಿತ್ತು. ಅನಂತರದಲ್ಲಿ, ಅದು ಒಂದು ಲಿಖಿತ ದಸ್ತಾವೇಜು ಅಥವಾ ಒಂದು ಪುಸ್ತಕ ಎಂದರ್ಥವನ್ನು ಪಡೆದುಕೊಂಡಿತು. (J. Kühlewein, "סֵפֶר," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann [Peabody, Mass.: Hendrickson Publishers, 1997], 2:808.) [2]ದೇವರು ಹೇಗೆ ಈ ಜೀವಿತಾವದಿಗಳನ್ನು ವಿಸ್ತರಿಸಿದನು ಎಂಬುದರ ಬಗ್ಗೆ ವಾಕ್ಯವು ವಿವರಿಸುವದಿಲ್ಲ. ಒಂದು ಸಂಭಾವ್ಯ ವಿವರಣೆಯು ಏನೆಂದರೆ, ಪ್ರಳಯಕ್ಕೆ ಮುನ್ನ, ಆಕಾಶದಲ್ಲಿ ಒಂದು ದಟ್ಟವಾದ ಹಬೆಯ ಛಾವಣಿಯಿತ್ತು, ಅದು ವಯಸ್ಸನ್ನುಂಟು ಮಾಡುವ ಮರಣಾಂತಿಕ ಸೂರ್ಯ ಕಿರಣಗಳನ್ನು ಸೋಸುತ್ತಿತ್ತು. ಆದದರಿಂದ, ಈಗ ಪ್ರಸ್ತುತ ಕಾಲದಲ್ಲಿ ನಡೆಯುವಂತೆ, ಜನರು ಆಗ ಇಷ್ಟೊಂದು ವೇಗವಾಗಿ ವಯಸ್ಸುಳ್ಳವರಾಗುತ್ತಿರಲಿಲ್ಲ. (John C. Whitcomb, Jr., and Henry M. Morris, *The Genesis Flood* [Philadelphia: Presbyterian & Reformed Publishing Co., 1961], 399–405.) [3]ನೆಹಮೀಯ 11:4ರಲ್ಲಿ "ಮಹಲಲೇಲ" ಎಂಬ ಬೇರೊಬ್ಬ ವ್ಯಕ್ತಿಯು ಹೆಸರಿಸಲ್ಪಡುತ್ತಾನೆ, ಮತ್ತು 1 ಪೂರ್ವಕಾಲವೃತ್ತಾಂತ 4:18ರಲ್ಲಿ ಮತ್ತೊಬ್ಬ "ಯಾರೆದ" ("ಯೆರೆದ್") ಕಾಣಿಸಿಕೊಳ್ಳುತ್ತಾನೆ. [4]ಇನ್ನು ಕೆಲವು ಬೇರೆ ವಾಕ್ಯಗಳು ಸಾಮ್ಯತೆಯನ್ನು ಹೊಂದಿವೆ. ಮಲಾಕಿ 2:6ರಲ್ಲಿ, ತಾನು ಯಾಜಕರಿಂದ ಏನನ್ನು ನಿರೀಕ್ಷಿಸುತ್ತಾನೆಂಬುದನ್ನು ಯೆಹೋವನು ಅವರಿಗೆ ಹೇಳಿದನು. ಲೇವಿಯ ವಿಷಯವಾಗಿ, ದೇವರು ಹೀಗೆ ಹೇಳಿದನು, "ಅವರು ಶಾಂತಿಯಿಂದಲೂ ಸದ್ಧರ್ಮದಿಂದಲೂ ನನ್ನೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ." ಅಬ್ರಹಾಮ ಮತ್ತು ಇಸಾಕರು "ದೇವರ ಮುಂದೆ ನಡೆದುಕೊಂಡರು" ಎಂದು ಸಹ ಹೇಳಲಾಗಿರುತ್ತದೆ (17:1; 24:40; 48:15). [5]Jon D. Levenson, "Genesis," in *The Jewish Study Bible*, ed. Adele Berlin and Marc Zvi Brettler (New York: Oxford University Press, 2004), 20. [6]ಆದಿಕಾಂಡ 5ರಲ್ಲಿ ಹನೋಕನು ಸ್ಥಳಾಂತರಗೊಳ್ಳುವ ಕಥೆಯು ಅನ್ಯಧರ್ಮಿಯ ಸಾಹಿತ್ಯದಲ್ಲಿ ಅನುಕರಿಸಲ್ಪಟ್ಟಿದೆ. ನೋಡಿರಿ Gordon J. Wenham, *Genesis 1–15*, Word Biblical Commentary, vol. 1 (Waco, Tex.: Word Books, 1987), 128. [7]Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 81. [8]Leonard J. Coppes, "נחם," in *TWOT*, 2:562–63. [9]ಆದಿಕಾಂಡ 10:1ರ ಪ್ರಕಾರವಾಗಿ, ನೋಹನ ಮೊಮ್ಮಕ್ಕಳು ಪ್ರಳಯವು ಮುಗಿದು ಹೋದ ನಂತರವಷ್ಟೆ ಹುಟ್ಟಿದ್ದರು. [10]K. A. Kitchenನು ಸೃಷ್ಟಿಯ ದಿನಾಂಕವನ್ನು ಕ್ರಿ.ಪೂ. 4000ಕ್ಕೆ ನಿಗದಿ ಪಡಿಸಲು ಸಾಧ್ಯವಿಲ್ಲವೆಂದು ವಾದಿಸುತ್ತಾನೆ, ಯಾಕೆಂದರೆ ಪ್ರಾಚೀನ ಮಧ್ಯಪ್ರಾಚ್ಯದಲ್ಲಿನ ಸ್ಥಳಗಳು ಮಾನವ ವಾಸಸ್ಥಾನಗಳನ್ನು ಮತ್ತು ಆ ಕಾಲಕ್ಕೆ ಸಾವಿರಾರು ವರ್ಷಗಳ ಮುಂಚೆಯೇ ನಾಗರೀಕತೆಯು ಅಭಿವೃದ್ಧಿಗೊಂಡಿದ್ದನ್ನು ತೋರಿಸುತ್ತವೆ. (K. A. Kitchen, *Ancient Orient and Old Testament* [Downers Grove, Ill.: InterVarsity, 1966], 36–37.)

[11]Gleason L. Archer, Jr., “The Chronology of the Old Testament,” in *The Expositor’s Bible Commentary*, vol. 1, *Introductory Articles*, ed. Frank E. Gaebelein (Grand Rapids, Mich.: Zondervan Publishing House, 1979), 361. [12]John H. Sailhamer, “Genesis,” in *The Expositor’s Bible Commentary*, vol. 2, *Genesis, Exodus, Leviticus, Numbers*, ed. Frank E. Gaebelein (Grand Rapids, Mich.: Zondervan Publishing House, 1990), 72. [13]Kenneth A. Mathews, *Genesis 1–11:26*, The New American Commentary, vol. 1A (Nashville: Broadman & Holman Publishers, 1996), 303–5. [14]R. K. Harrison, “Genealogy,” in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:426. [15]ಇಸಾಕನು ರೆಬೆಕ್ಕಳನ್ನು ಮದುವೆಯಾದ ವೇಳೆ ನಾಲ್ವತ್ತು ವರ್ಷದವನಾಗಿದ್ದನು (25:20), ಮತ್ತು ಏಸಾವನು ಮೊದಲ ಹೆಂಡತಿಯನ್ನು ಮಾಡಿಕೊಂಡ ವೇಳೆ ಅಷ್ಟೇ ವಯಸ್ಸಿನವನಾಗಿದ್ದನು (26:34); ಹೇಗೂ, ಒಂದು ನಿಯಮ ಆಗಿರುವದರ ಬದಲಾಗಿ ವಿನಾಯಿತಿಗಳಾಗಿದ್ದವು. [16]ಒಂದು ಅಂದಾಜು “ಮೂವತ್ತು ಅಥವಾ ಕಡಿಮೆ ವರ್ಷಗಳು” (Harrison, 2:426). [17]ವಂಶಾವಳಿಗಳು ಸಾಮಾನ್ಯವಾಗಿ ಪುರುಷನ ವಂಶದಲ್ಲಿ ಗುರುತಿಸಲ್ಪಡುತ್ತವಾದರೂ, ಕ್ರಿಸ್ತನ ವಂಶಾವಳಿಯು ಹಲವಾರು ಸ್ತ್ರೀಯರನ್ನು ಸೇರ್ಪಡೆಗೊಳಿಸುತ್ತದೆ (ಮತ್ತಾಯ 1:3-6, 16). [18]ಇದು ಲೆಮೆಕನ ಮಗಳಾದ ನಾಮಾಥಳು ಕೈ ಬಿಟ್ಟಿರುತ್ತದೆ, ಯಾಕೆಂದರೆ ಸಾಮಾನ್ಯವಾಗಿ ಮಹಿಳೆಯರನ್ನು ಸೇರ್ಪಡೆಗೊಳಿಸುತ್ತಿರಲಿಲ್ಲ. [19]Jack M. Sasson, “Generation, Seventh,” in *The Interpreter’s Dictionary of the Bible*, supplementary vol., ed. Keith Crim (Nashville: Abingdon Press, 1976), 355–56. [20]2 ಅರಸು 14:21ರಲ್ಲಿ ಆತನು “ಅಜರ್ಯ” ಎಂದು ಮತ್ತು ಸಮಾಂತರ ವಾಕ್ಯಭಾಗವಾದ 2 ಪೂರ್ವಕಾಲವೃತ್ತಾಂತ 26:1ರಲ್ಲಿ “ಉಜ್ಜೀಯ” ಎಂದು ಕರೆಯಲ್ಪಟ್ಟಿದ್ದಾನೆ.

[21]ಅತ್ಯಂಥ ಆಧುನಿಕ ಆವೃತ್ತಿಗಳು “ಪಡೆದನು” ಎಂಬ ಕ್ರಿಯಾಪದದ ಬದಲಾಗಿ “ತಂದೆ” ಎಂಬ ನಾಮಪದವಿರುವ ಬೇರೆ ಬೇರೆ ಪದಗುಚ್ಛಗಳನ್ನು ಬಳಸುತ್ತವೆ. [22]Paul R. Gilchrist, “יָלַד,” in *TWOT*, 1:379. [23]F. Charles Fensham, *The Books of Ezra and Nehemiah*, The New International Commentary on the Old Testament (Grand Rapids, Mich.: Wm. B. Eerdmans Publishing Co., 1982), 98. [24]ಭೂಮಿಯ ದೂರದ ಮೂಲೆಗಳಲ್ಲಿ ಕೆಲವು ಸಾಕ್ಷರಪೂರ್ವ ಸಮಾಜಗಳಲ್ಲಿ ಈಗಲೂ ಇದೊಂದು ಪದ್ಧತಿಯಾಗಿರುತ್ತದೆ. [25]André Lemaire, “Writing and Writing Materials,” in *The Anchor Bible Dictionary*, ed. David Noel Freedman (New York: Doubleday, 1992), 6:999. [26]ಸತ್ತವರು ಪ್ರಜ್ಞೆಯಿಲ್ಲದವರಾದರೂ ಆಗಿರುವದು ಅಥವಾ ಅವಸಾನ ಆಗುವ ವೇಳೆ ಅವರು ಇಲ್ಲದೆ ಹೋಗುವರು ಎಂಬುದಾಗಿ ಜ್ಞಾನಿಯು ಹೇಳುತ್ತಿರುವನು ಎಂಬುದಾಗಿ ಕೆಲವರು ನಂಬುತ್ತಾರೆ. ಅದಕ್ಕೆ ತದ್ವಿರುದ್ಧವಾಗಿ, ಅವರಿಗೆ ಇನ್ನು ಮೇಲೆ ಭೂಮಿಯ ಮೇಲೆ ಏನು ನಡೆಯುತ್ತಿದೆ ಎಂಬುದು ತಿಳಿಯುವದಿಲ್ಲ, ಮತ್ತು ಲೋಕದಲ್ಲಿ ಜೀವನವನ್ನ ಮುಂದುವರೆಸಿರುವವರು ಅವರ ಬಗ್ಗೆ ಮರೆತು ಹೋಗುವರು, ಆದ್ದರಿಂದ ಅವರ ನೆನಪು ಶೀಘ್ರವೇ ಕಣ್ಮರೆಯಾಗುವುದು ಎಂಬುದಾಗಿ ಆತನು ಹೇಳುತ್ತಿದ್ದಾನಷ್ಟೆ. [27]ಯೂದ 14, 15ರಲ್ಲಿ ಹನೋಕನ ಕುರಿತಾದ ಚರ್ಚೆಗೋಸ್ಕರ, ನೋಡಿರಿ Duane Warden, *1 & 2 Peter and Jude*, Truth for Today Commentary (Searcy, Ark.: Resource Publications, 2009), 499–502.